ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

# ಸ್ವಾಭಿಮಾನಿ ಸಹಕಾರಿ

Swabhimani Sahakari

Volume - 12
Issue - 12
Pages - 24
₹ - 12
December - 2015



ಬರುವ ಮುಂದಿನ ದಿನದ ನವನವೋದಯಕ್ಕಾಗಿ
ಪ್ರಕೃತಿ ತಪವಿರುವಂತೆ ತೋರುತ್ತಿತ್ತು ।
ಶಾಂತ ರೀತಿಯಲಿರುಳು ಮೆಲ್ಲಮೆಲ್ಲನೆ ಉರುಳಿ
ನಾಳಿನ ಶುಭೋದಯ ಸಾರುತ್ತಿತ್ತು ॥

–ಎಸ್.ವಿ. ಪರಮೇಶ್ವರ ಭಟ್ಟ





ಈದ್ ಮಿಲಾದ್,
ಕ್ರಿಸ್‌ಮಸ್
ಶುಭಾಶಯಗಳು

ಸೌಹಾರ್ದ ಸಹಕಾರಿಗಳ ಸಂಖ್ಯೆ : 3400 ‘ಇ’ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 865

# ಸಹಕಾರ ಕ್ಷೇತ್ರದ ಅಭಿವೃದ್ಧಿಯಲ್ಲಿ ಕಾನೂನಿನ ಪಾತ್ರ



> ಪ್ರತಿಯೊಬ್ಬ ಭಾರತೀಯ ಪ್ರಜೆಯು ಸಹಕಾರ ಸಂಸ್ಥೆಯನ್ನು ರಚಿಸಿಕೊಳ್ಳುವುದು ಮೂಲಭೂತ ಹಕ್ಕು. ಸಹಕಾರ ಸಂಸ್ಥೆಗಳ ಸ್ವಇಚ್ಛೆಯ ರಚನೆ, ಸ್ವಾಯತ್ತ ಕಾರ್ಯಾಚರಣೆ, ಪ್ರಜಾಸತ್ತಾತ್ಮಕ ಹತೋಟಿ, ವೃತ್ತಿಪರ ವ್ಯವಸ್ಥಾಪನೆ ಇವುಗಳನ್ನು ರಾಜ್ಯವು ಪ್ರೋತ್ಸಾಹಿಸಬೇಕು ಎಂಬುದು ಸಂವಿಧಾನದ ತಿದ್ದುಪಡಿಯ ಆಶಯ.

ಆತ್ಮೀಯ ಸಹಕಾರಿ ಬಂಧುಗಳೇ,

ಎಲ್ಲ ಸಹಕಾರಿಗಳಿಗೆ ಕ್ರಿಸ್‌ಮಸ್ ಹಾಗೂ ಈದ್–ಮಿಲಾದ್ ಹಬ್ಬದ ಶುಭಾಶಯಗಳು.

ಸಹಕಾರಿ ಸಂಸ್ಥೆಗಳು ಸಾಮಾಜಿಕ ಬದ್ಧತೆಯನ್ನು ಹೊಂದಿರುವ ವ್ಯಾವಹಾರಿಕ ಸಂಸ್ಥೆಗಳು. ಇವುಗಳಿಗೆ ತಮ್ಮದೇ ಆದ ಕಾಯಿದೆ, ನಿಯಮಗಳು ಮತ್ತು ಉಪನಿಬಂಧನೆಗಳು ಇವೆ. ಪ್ರತಿಯೊಂದು ಸಹಕಾರ ಸಂಸ್ಥೆಗಳ ಸದಸ್ಯರು ಮತ್ತು ಆಡಳಿತ ಮಂಡಲಿಯವರು ಈ ಕಾಯಿದೆ ಮತ್ತು ನಿಯಮಗಳ ಚೌಕಟ್ಟಿನಲ್ಲಿ ವ್ಯವಹರಿಸುವ ಅಗತ್ಯತೆಯೂ ಇದೆ. ಮುಕ್ತ ಮತ್ತು ಸ್ವಯಂಪ್ರೇರಿತ ಸದಸ್ಯತ್ವ, ಪ್ರಜಾಸತ್ತಾತ್ಮಕ ಸದಸ್ಯ ಹತೋಟಿ, ಆರ್ಥಿಕ ಚಟುವಟಿಕೆಗಳಲ್ಲಿ ಸದಸ್ಯರು ಪಾಲ್ಗೊಳ್ಳುವಿಕೆ, ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ, ಸಾಮಾಜಿಕ ಕಳಕಳಿ ಈ ಸಹಕಾರಿ ತತ್ವಗಳ ಆಧಾರದ ಮೇಲೆ ಕಾಯಿದೆ ಮತ್ತು ನಿಯಮಗಳು ರಚನೆಯಾಗಿವೆ.

ಸಂವಿಧಾನದ 97ನೇ ತಿದ್ದುಪಡಿ, ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959, ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997ರ ಆಶಯಗಳಲ್ಲಿಯೂ ಸಹಕಾರಿ ತತ್ವಗಳಿಗೆ ಪ್ರಾಮುಖ್ಯತೆ ಕೊಡಲಾಗಿದೆ.

ಕರ್ನಾಟಕದಲ್ಲಿ ಜಾರಿಯಲ್ಲಿರುವ ಎರಡೂ ಕಾಯಿದೆಗಳು ರಾಜ್ಯದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಪೂರಕ ಕಾಯಿದೆಗಳೆಂಬುದನ್ನು ಅರ್ಥಮಾಡಿಕೊಂಡು ಈ ಕಾಯ್ದೆಗಳು ಯಾವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿದರೆ ಈ ಸಹಕಾರ ಚಳುವಳಿಯ ಅಭಿವೃದ್ಧಿಯು ಸಾಧ್ಯ ಎಂಬ ಬಗ್ಗೆ ಚಿಂತನೆ ಮಾಡುವುದು ಅವಶ್ಯಕ. ಪ್ರತಿಯೊಬ್ಬ ಭಾರತೀಯ ಪ್ರಜೆಯು ಸಹಕಾರ ಸಂಸ್ಥೆಯನ್ನು ರಚಿಸಿಕೊಳ್ಳುವುದು ಮೂಲಭೂತ ಹಕ್ಕು. ಸಹಕಾರ ಸಂಸ್ಥೆಗಳ ಇಚ್ಛೆಯ ರಚನೆ, ಸ್ವಾಯತ್ತ ಕಾರ್ಯಾಚರಣೆ, ಪ್ರಜಾಸತ್ತಾತ್ಮಕ ಹತೋಟಿ, ವೃತ್ತಿಪರ ವ್ಯವಸ್ಥಾಪನೆ ಇವುಗಳನ್ನು ರಾಜ್ಯವು ಪ್ರೋತ್ಸಾಹಿಸಬೇಕು ಎಂಬುದು ಸಂವಿಧಾನದ ತಿದ್ದುಪಡಿಯ ಆಶಯ. ಸಹಕಾರ ಕಾಯ್ದೆ ಹಾಗೂ ಸೌಹಾರ್ದ ಸಹಕಾರಿ ಕಾಯ್ದೆಗಳ ಅನೇಕ ಅಂಶಗಳಲ್ಲಿ ಪ್ರಜಾಪ್ರಭುತ್ವದ ತತ್ವಗಳನ್ನು ಅಳವಡಿಸಿ, ಸಹಕಾರ ಸಂಸ್ಥೆಗಳಿಗೆ ಸಂಪೂರ್ಣ ಸ್ವಾಯತ್ತತೆಯನ್ನು ಮತ್ತು ವ್ಯಾವಹಾರಿಕ ಸ್ವಾತಂತ್ರ್ಯವನ್ನು ನೀಡುವಂತಾದರೆ ಮಾತ್ರ ಈ ಸಹಕಾರ ಚಳುವಳಿ ಅಭಿವದ್ಧಿಯನ್ನು ಹೊಂದುವುದು ಸಾಧ್ಯವಾಗುತ್ತದೆ. ತಪ್ಪು ಮಾಡುವುದು ಸಹಜ. ತಪ್ಪುಗಳನ್ನು ಸಾರ್ವತ್ರಿಕ ತಪ್ಪುಗಳೆಂದು ಸಾರಿ ಸಮಗ್ರ ಸಹಕಾರ ಕ್ಷೇತ್ರದ ಮೇಲೆ ಪ್ರಹಾರ ಸಲ್ಲದು. ಸಹಕಾರಿಗಳು ತಪ್ಪು ಮಾಡಿದಾಗ ತಿದ್ದಿಕೊಳ್ಳಲು ಅವಕಾಶ ನೀಡುವ ಮತ್ತು ತಪ್ಪಿತಸ್ಥರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸುವ ವ್ಯವಸ್ಥೆ ಕಾಯ್ದೆಗಳಲ್ಲಿ ಇರುವುದು ಅವಶ್ಯಕ.

ಸಹಕಾರ ಕ್ಷೇತ್ರ ಕಾರ್ಯನಿರ್ವಹಿಸದೇ ಇರುವ ಸ್ಥಳವೇ ಇಲ್ಲ. ಎಲ್ಲ ರಂಗಗಳಲ್ಲೂ ಸಹಕಾರ ವ್ಯಾಪಿಸಿದೆ. ಈ ಕ್ಷೇತ್ರದ ಕಾರ್ಯನಿರ್ವಹಣೆಗೆ ಹೆಚ್ಚಿನ ಅವಕಾಶಗಳಿವೆ. ಹೊಸ ಹೊಸ ಕ್ಷೇತ್ರಗಳ ಅನ್ವೇಷಣೆಯೂ ನಡೆದಿದೆ. ಸಹಕಾರ ಕ್ಷೇತ್ರದ ಕಾರ್ಯನಿರ್ವಹಣೆಗೆ ಆಕಾಶವೇ ಕೊನೆ. (sky is the limit for the working of these cooperative societies). ಸಾಧಿಸಿದ್ದು ಸಾಕಷ್ಟಿದೆ. ಸಾಧಿಸಬೇಕಾದುದು ಇನ್ನೂ ಇದೆ. ಈ ಚಳುವಳಿಯ ಬೆಳವಣಿಗೆಗೆ ಸಹಕಾರಿ ಕಾನೂನುಗಳು ಪ್ರೇರಕವಾಗಿರಬೇಕು ಮತ್ತು ಪೂರಕವಾಗಿರಬೇಕು ಎಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆ.

▶▶ **ಗುರುನಾಥ ಜಾಂತಿಕರ,** ಅಧ್ಯಕ್ಷರು

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಗುರುನಾಥ ಜಾಂತಿಕರ
ಗೌರವ ಅಧ್ಯಕ್ಷರು

ಶ್ರೀ ಹೆಚ್.ವಿ.ರಾಜೀವ
ಗೌರವ ಉಪಾಧ್ಯಕ್ಷರು

ಶ್ರೀ ಎಸ್.ಆರ್.ಸತೀಶಚಂದ್ರ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜಿ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಒಳ ಪುಟಗಳಲ್ಲಿ...

ಕಲಬುರಗಿಯಲ್ಲಿ 62ನೇ ಸಹಕಾರ ಸಪ್ತಾಹದ ಸಮಾರೋಪ ಕಾರ್ಯಕ್ರಮ ........ 5

62ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಂದರ್ಭದಲ್ಲಿ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರು ........ 6

ಮೈಸೂರಿನಲ್ಲಿ 62ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆ ........ 7

ಸದಸ್ಯರ ಆಶೋತ್ತರಗಳನ್ನು ಈಡೇರಿಸುವಲ್ಲಿ ಸಹಕಾರಿ ಸಂಸ್ಥೆಗಳು ಹೆಚ್ಚಿನ ಆಸಕ್ತಿ ಹೊಂದಲಿ – ಶ್ರೀ ಭಾಸ್ಕರ ಹೆಗಡೆ ಕಾಗೇರಿ ........ 12

ಶಿವಮೊಗ್ಗ ಜಿಲ್ಲಾ ಸಮ್ಮೇಳನ – ಸೌಹಾರ್ದ ಸಹಕಾರಿಗಳ ಒಕ್ಕೂಟದ ಉದ್ಘಾಟನೆ ........ 14

ಸಹಕಾರಿ ಶಿಕ್ಷಣದ ಮಹತ್ವ ........ 16

ಸಹಕಾರಿ ಕ್ಷೇತ್ರದಲ್ಲಿ ಪರಿಣಾಮಕಾರಿ ನಾಯಕತ್ವ : ಭಾಗ–2 ನಾಯಕತ್ವ ........ 17

ಯುವ ಪೀಳಿಗೆ ಹಾಗೂ ಗ್ರಾಮೀಣ ಪ್ರತಿಭೆಗೆ "ಮುದ್ರಾ" ರಹದಾರಿ ........ 19

ಸಹಕಾರ ಸಂಘಗಳ ಮೂಲಕ ಸ್ವಚ್ಛ ಭಾರತ, ನಿರ್ಮಲ ಭಾರತ ಅಭಿಯಾನದ ಅನುಷ್ಠಾನ ........ 21

RBI NEWS - NOVEMBER 2015 8 K.Vittal Shetty ........ 23

# ಸಂಪಾದಕೀಯ

## ಸೌಹಾರ್ದ ಸಹಕಾರಿಗಳು ಸಮಗ್ರ ಅಭಿವೃದ್ಧಿಯ ಕನಸು ನನಸಾಗಿಸುವ ಅಗತ್ಯತೆ

ರಾಜ್ಯದಲ್ಲಿ ಸೌಹಾರ್ದ ಸಹಕಾರ ಕ್ಷೇತ್ರದ 15 ವರ್ಷಗಳ ಕಾರ್ಯನಿರ್ವಹಣೆ ಸಾರ್ವಜನಿಕರಿಗೆ, ಸಹಕಾರಿಗಳಿಗೆ ಹಾಗೂ ಸರಕಾರಕ್ಕೆ ತೃಪ್ತಿ ತಂದಿದೆ ಎಂದು ಭಾವಿಸಿದ್ದೇನೆ. ಸೌಹಾರ್ದ ಸಹಕಾರಿಗಳು ರಾಜ್ಯವ್ಯಾಪಿ ಬೆಳೆದಿದ್ದಾರೆ, ಗುರುತಿಸಿಕೊಂಡಿದ್ದಾರೆ, ವಿಶಿಷ್ಠತೆಯನ್ನು–ವೈಶಿಷ್ಟ್ಯತೆಯನ್ನು ಕಾಯ್ದುಕೊಂಡಿದ್ದಾರೆ. ರಾಷ್ಟ್ರಮಟ್ಟದವರೆಗೂ ಕರ್ನಾಟಕದ ಸೌಹಾರ್ದ ಸಹಕಾರಿ ಕಾಯ್ದೆಯ, ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ಹರಡಿದೆ. ಉತ್ತಮ ಪ್ರತಿಕ್ರಿಯೆ ಹಾಗೂ ಮಾನ್ಯತೆ ದೊರೆತಿದೆ.

ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಸಕ್ತದ ಈ ಕಾರ್ಯಚಟುವಟಿಕೆಗಳಿಗೆ ಇಷ್ಟು ಮಾತ್ರ ಮಾನ್ಯತೆ ಸಾಲದು. ಹೆಚ್ಚಿನ ಜವಾಬ್ದಾರಿಯಿಂದ ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುವ ಅಗತ್ಯತೆ ಈಗ ಹೆಚ್ಚಿದೆ. ನಮ್ಮ ಕಾರ್ಯದಕ್ಷತೆಯನ್ನು ಉಳಿಸಿಕೊಂಡು ಹೋಗುವುದರ ಜೊತೆಗೆ ಸಹಕಾರಿಗಳ ಸ್ಥಾಪನೆಯ ಮೂಲ ಉದ್ದೇಶ ಹಾಗೂ ಸೌಹಾರ್ದ ಸಹಕಾರಿ ಕಾಯ್ದೆಯ ಆಶಯದಂತೆ ಸಹಕಾರಿ ಸಮಾಜದ ಸಮಗ್ರ ಅಭಿವೃದ್ಧಿಯ ಕನಸನ್ನು ನನಸಾಗುವ ಗುರಿಹೊಂದುವ ಅಗತ್ಯತೆ ಈಗ ಪ್ರಸ್ತುತ.

ಇಂದಿನ ಪೈಪೋಟಿ ಯುಗದಲ್ಲಿ ಖಾಸಗಿಯವರ ಹಾಗೂ ಕಂಪನಿಗಳ ಮಟ್ಟಕ್ಕೆ ಕಾರ್ಯನಿರ್ವಹಿಸುವ ಜೊತೆಗೆ ಸಮಾಜದ ಪ್ರತಿಯೊಂದು ಚಟುವಟಿಕೆಗಳನ್ನು ಸಹಕಾರೀಕರಣಗೊಳಿಸಿ, ಕಾರ್ಯನಿರ್ವಹಿಸುವುದೇ ಸಮಗ್ರ ಅಭಿವೃದ್ಧಿಯ ಕನಸಾಗಬೇಕಿದೆ. ಸಮಾಜದ ಅರ್ಥವ್ಯವಸ್ಥೆಯ ಹಾಗೂ ಸಾಮಾಜಿಕ ಚಟುವಟಿಕೆಗಳ ಅವಿಭಾಜ್ಯ ಅಂಗವಾಗಿ ಹೊರಹೊಮ್ಮ ಬೇಕಿದೆ. ಸೌಹಾರ್ದ ಸಹಕಾರಿಗಳಿಗೆ ಸಾಕಷ್ಟು ಸವಾಲುಗಳು ಇವೆ. ಅವುಗಳನ್ನು ಎದುರಿಸಿ, ಸದ್ಯದ ಅನುಕೂಲಕರ ವಾತಾವರಣವನ್ನು ನಗದೀಕರಿಸಿ, ಕಾರ್ಯನಿರ್ವಹಿಸಬೇಕು.

ಸ್ವಾಭಾವಿಕ ಸಂಪನ್ಮೂಲಗಳ ಸಂಗ್ರಹ ಹಾಗೂ ಸದುಪಯೋಗಕ್ಕೆ ಒತ್ತು ನೀಡುವುದು, ಮಾನವ ಸಂಪನ್ಮೂಲಗಳ ಪೂರ್ಣ ಉಪಯೋಗ ಹಾಗೂ ಸಮಾಜದ ಎಲ್ಲ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಕ್ರಿಯಾ ಯೋಜನೆ ಜಾರಿಮಾಡುವುದು. ಇದಕ್ಕಾಗಿ ಸೌಹಾರ್ದ ಸಹಕಾರಿಗಳು ಆಧುನಿಕ ತಂತ್ರಜ್ಞಾನವನ್ನು ಬಳಸುವ ಅಗತ್ಯತೆಯೂ ಇದೆ. ಸೌಹಾರ್ದ ಸಹಕಾರಿ ಕ್ಷೇತ್ರದ ಮೂಲಕ ಈಗಾಗಲೇ ಹತ್ತು ಹಲವು ಕಾರ್ಯಚಟುವಟಿಕೆಗಳನ್ನು ನಿರ್ವಹಿಸಲಾಗುತ್ತಿದೆ. ಇವುಗಳ ಜೊತೆಗೆ ಇನ್ನೂ ಹಲವು ಹೊಸ ಯೋಜನೆಗಳನ್ನು ರೂಪಿಸಿ, ಕಾರ್ಯನಿರ್ವಹಿಸುವುದಾದರೆ ಈ ಕನಸು ನನಸಾಗುವುದರಲ್ಲಿ ಸಂದೇಹವಿಲ್ಲ. ■

## ಮನಸ್ಸು – ಸ್ವರೂಪಗಳು

ಇದೊಂದು ಬದುಕು, ಈ ಬದುಕಿನೊಳಗೆ ಏನು ಬಿತ್ತಬೇಕು? ಏನು ಬೆಳೆಯಬೇಕು? ಎನ್ನುವುದು ಮುಖ್ಯ. ಈ ಪ್ರಪಂಚದೊಳಗೆ ಬದುಕು ಮುಖ್ಯ. ಮನಸ್ಸು ಕ್ಷೇತ್ರ. ಅದು ಭೂಮಿ ಇದ್ದಂತೆ. ಮನಸ್ಸಿನ ಕ್ಷೇತ್ರ ಬಹಳ ದೊಡ್ಡದು. ಮನಸ್ಸು ಅದ್ಭುತವಾದದ್ದು. ಅದು ಯೋಚಿಸುತ್ತದೆ, ಅಲೆದಾಡುತ್ತದೆ, ಸುಖಿಸುತ್ತದೆ, ಹಿಗ್ಗುತ್ತದೆ, ಕುಗ್ಗುತ್ತದೆ. ಮನಸ್ಸನ್ನು ಎಷ್ಟು ದೊಡ್ಡದು ಬೇಕಾದರೂ ಮಾಡಬಹುದು. ಎಷ್ಟು ಚಿಕ್ಕದು ಬೇಕಾದರೂ ಮಾಡಬಹುದು. ಅದು ಹೊರಗಿನ ಭೂಮಿಯಂತಲ್ಲ. ನೀವೆಲ್ಲಾ ಭೂಮಿಯನ್ನು ಹೊಂದಿದ್ದರೆ 10 ಹೆಕ್ಟೇರ್, 100 ಹೆಕ್ಟೇರ್, ಕೆಲವರು ಹೆಚ್ಚು, ಇನ್ನು ಕೆಲವರು ಕಡಿಮೆ ಭೂಮಿ ಹೊಂದಿದ್ದೀರಿ. ಆದರೆ, ಈ ಭೂಮಿಯೊಳಗೆ ಎಲ್ಲಾ ಬೆಳೆಯೋಕೆ ಆಗುವುದಿಲ್ಲ. ಮಲೆನಾಡಿನಲ್ಲಿ ಕಾಫಿ ಬೆಳೆದಂತೆ, ಬಯಲು ಸೀಮೆಯಲ್ಲಿ ಬೆಳೆಯೋಕೆ ಆಗುವುದಿಲ್ಲ. ಒಂದು ಕಡೆ ಬೆಳೆಯೋಕೆ ಆಗುವುದನ್ನು, ಇನ್ನೊಂದು ಕಡೆ ಬೆಳೆಯೋಕೆ ಆಗುವುದಿಲ್ಲ. ಭೂಮಿಯನ್ನು ವಿಸ್ತರಿಸೋಕೆ ಆಗುವುದಿಲ್ಲ. ಆದರೆ, ಈ ಮನಸ್ಸಿನ ಕ್ಷೇತ್ರ ಹಾಗಲ್ಲ. ಇಲ್ಲಿ ಬೇಕಾದಷ್ಟು ಬೆಳೆಯಬಹುದು. ಈ ಭೂಮಿ ಮೇಲೆ ಏನೆಲ್ಲಾ ಬೆಳೆಯೋಕೆ ಬರುತ್ತದೆಯೋ.... ಅದೆಲ್ಲವನ್ನೂ ಮನಸ್ಸಿನೊಳಗೆ ಬೆಳೆಯಬಹುದು. ಎಲ್ಲರಿಗೂ ಮನಸ್ಸು ಇದೆ. ಇದರಲ್ಲಿ ಭೇದ ಇಲ್ಲ. ಇದನ್ನು ಎಷ್ಟು ದೊಡ್ಡದು ಮಾಡಬಹುದೆಂದರೆ ಇಡೀ ಪ್ರಪಂಚವನ್ನೇ ಮನಸ್ಸಿನಲ್ಲಿ ತುಂಬಿಕೊಳ್ಳಬಹುದು. ಅದೇ ರೀತಿ ಎಷ್ಟು ಚಿಕ್ಕದು ಬೇಕಾದರೂ ಮಾಡಿಕೊಳ್ಳಬಹುದು. ನಮ್ಮ ಪಕ್ಕದಲ್ಲಿದ್ದವರು ನಮ್ಮವರಲ್ಲ ಎಂದೆನಿಸಬಹುದು. ಮನಸ್ಸು ನಮ್ಮೊಳಗೆ ಭೇದ ಹುಟ್ಟಿಸುತ್ತದೆ. ಅದು ಕನಿಷ್ಠ, ಇದು ಶ್ರೇಷ್ಠ ಎಂದು ಯೋಚನೆ ಮಾಡುತ್ತದೆ. ಭೇದ ಕಲ್ಪಿಸುತ್ತದೆ. ಹಿರಿಯವನಿಗೆ ಒಂದು ತರ, ಚಿಕ್ಕವನಿಗೆ ಒಂದು ತರ. ಹೀಗಾಗಿ ನಮ್ಮ ಮನಸ್ಸನ್ನು ವಿಶಾಲ ಮಾಡಿಕೊಳ್ಳಬೇಕು. ಒಳ್ಳೆಯ ವಿಚಾರಗಳನ್ನು ಬಿತ್ತಬೇಕು, ಬೆಳೆಯಬೇಕು. ನಮ್ಮ ದೇಶದ ಶ್ರೇಷ್ಠ ಗ್ರಂಥಗಳೆಲ್ಲವು ಇದನ್ನೇ ಹೇಳಿವೆ.




## ತಮಿಳುನಾಡು ನೆರೆ ಸಂತ್ರಸ್ತರ ನಿಧಿಗೆ ದೇಣಿಗೆ ನೀಡಲು ಮನವಿ

ತಮಿಳುನಾಡಿನಲ್ಲಿ ಸಂಭವಿಸಿರುವ ಭೀಕರ ಚಂಡಮಾರುತದ ಪರಿಣಾಮದಿಂದಾಗಿ ತತ್ತರಿಸುತ್ತಿರುವ ಜನರಿಗೆ ಸಹಕಾರಿ ಸಂಸ್ಥೆಗಳು ಮಾನವೀಯತೆಯ ದೃಷ್ಟಿಯಿಂದ ಎಲ್ಲಾ ವಿಧವಾದ ವಿಶೇಷವಾಗಿ ಹಣಕಾಸಿನ ನೆರವು ನೀಡಲು ಮುಂದಾಗಬೇಕೆಂದು ಮಾನ್ಯ ಸಹಕಾರ ಹಾಗೂ ಸಕ್ಕರೆ ಸಚಿವರಾದ ಶ್ರೀ ಹೆಚ್.ಎಸ್. ಮಹದೇವಪ್ರಸಾದ್‌ರವರು ದಿನಾಂಕ : 04.12.2015ರಂದು ನಡೆದ ಸಹಕಾರಿಗಳ ಸಭೆಯಲ್ಲಿ ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು, ಪ್ರವಾಹ ಸಂತ್ರಸ್ತರಿಗೆ ಸಾಂತ್ವನವನ್ನು ಹೇಳುವುದರ ಜೊತೆಗೆ ಅವರಿಗೆ ನೆರವನ್ನು ನೀಡುವ ದೃಷ್ಟಿಯಿಂದ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಂದ ಹಣವನ್ನು ಸಂಗ್ರಹಿಸಿ, ಕಳುಹಿಸಲು ಉದ್ದೇಶಿಸಿದೆ. ಆದ್ದರಿಂದ, ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಉದಾರವಾಗಿ ಹಣ ಕಳುಹಿಸಿ, ಈ ವಿಪತ್ತಿನ ಪರಿಹಾರ ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಅಪೇಕ್ಷಿಸುತ್ತದೆ.

ಸೌಹಾರ್ದ ಸಹಕಾರಿಗಳು "ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., (KARNATAKA STATE SOUHARDA FEDERALE COOPARETIVE LTD.) ಎಂಬ ಹೆಸರಿನಲ್ಲಿ ಚೆಕ್/ಡಿಡಿ ಕಳುಹಿಸಲು ಕೋರಿದೆ ಅಥವಾ ಸಂಯುಕ್ತ ಸಹಕಾರಿಯು "ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್"ನಲ್ಲಿ ಹೊಂದಿರುವ ಖಾತೆ ಸಂಖ್ಯೆ : 1037102040000006, IFSC CODE: KSCB0000001, ಇದಕ್ಕೆ NEFT/RTGS" ಮೂಲಕ ಕೂಡ ಕಳುಹಿಸಬಹುದಾಗಿದ್ದು, NEFT/RTGS ಮೂಲಕ ಪಾವತಿಸಿದ ವಿವರಗಳನ್ನು ಪತ್ರ ಮುಖೇನ ಸಂಯುಕ್ತ ಸಹಕಾರಿಗೆ ತಿಳಿಸಲು ಕೋರಿದೆ.

| ಸಹಿ/– | ಸಹಿ/– | ಸಹಿ/– |
|---|---|---|
| **ಗುರುನಾಥ ಜಾಂತಿಕರ** | **ಹೆಚ್. ವಿ. ರಾಜೀವ್** | **ಶರಣಗೌಡ ಜಿ. ಪಾಟೀಲ್** |
| ಅಧ್ಯಕ್ಷರು | ಉಪಾಧ್ಯಕ್ಷರು | ವ್ಯವಸ್ಥಾಪಕ ನಿರ್ದೇಶಕರು |

### ಕಲಬುರಗಿಯಲ್ಲಿ 62ನೇ ಸಹಕಾರ ಸಪ್ತಾಹದ ಸಮಾರೋಪ ಕಾರ್ಯಕ್ರಮ

## ಸಹಕಾರಿ ಸಂಸ್ಥೆಗಳು ವ್ಯವಹಾರಿಕ ಸಂಸ್ಥೆಗಳು; ದತ್ತಿ ಸಂಸ್ಥೆಗಳಲ್ಲ – ಶ್ರೀ ಗುರುನಾಥ ಜಾಂತಿಕರ

ದಿನಾಂಕ : 20.11.2015ರಂದು ಕಲಬುರಗಿಯ ವೀರಶೈವ ಕಲ್ಯಾಣಮಂಟಪದ ಎದುರು ವ್ಯವಸ್ಥೆ ಮಾಡಿದ್ದ ಭವ್ಯಸಭಾ ಮಂಟಪದಲ್ಲಿ 62ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಮಾರೋಪ ಹಾಗೂ ಸಹಕಾರ ಸಂಘಗಳ ಅಭಿವೃದ್ಧಿಗಾಗಿ ಕಾನೂನು ಬಲಪಡಿಸುವ ದಿನವನ್ನು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಯಾದಗಿರಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಕಲಬುರಗಿ, ಮಹಿಳಾ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕಲಬುರಗಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ, ಜಿಲ್ಲೆಯ ಪ್ರಾಥಮಿಕ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು, ತಾಲ್ಲೂಕಾ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಗಳು, ಸೌಹಾರ್ದ ಸಹಕಾರ ಸಂಸ್ಥೆಗಳು, ಕೃಷಿ ಪತ್ತಿನ ಸಹಕಾರ ಸಂಸ್ಥೆಗಳು, ಕ್ರೆಡಿಟ್ ಸಹಕಾರ ಸಂಸ್ಥೆಗಳು, ಹಾಲು ಉತ್ಪಾದಕರ ಸಹಕಾರ ಸಂಸ್ಥೆಗಳು ಇವುಗಳ ಸಹಯೋಗದೊಂದಿಗೆ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಸಹಕಾರ ಚಳುವಳಿಗೆ 111 ವರ್ಷಗಳ ಇತಿಹಾಸವಿದೆ. ಸಹಕಾರ ಸಂಸ್ಥೆಗಳು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಾ ಬಂದಿವೆ. ಸಹಕಾರ ಸಂಸ್ಥೆಗಳು ಕೇವಲ ಸೇವಾ ಸಂಸ್ಥೆಗಳಾಗಿರದೇ,




ಕಾರ್ಯಕ್ರಮವು ಬೆಳಿಗ್ಗೆ ನಗರದ ಐ.ಟಿ.ಐ ಕಾಲೇಜಿನಿಂದ ಸಹಕಾರಿ ಪಿತಾಮಹ ಶ್ರೀ ಸಿದ್ಧನಗೌಡ ಸಣ್ಣರಾಮನಗೌಡ ಪಾಟೀಲ್ ಇವರ ಭಾವ ಚಿತ್ರದ ಮೆರವಣಿಗೆಯೊಂದಿಗೆ ಪ್ರಾರಂಭವಾಯಿತು.



ಉದ್ಘಾಟನಾ ಕಾರ್ಯಕ್ರಮ

ವ್ಯವಹಾರಿಕ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುವ ಅಗತ್ಯತೆ ಇದೆ. ಅವು ದತ್ತಿ ಸಂಸ್ಥೆಗಳಲ್ಲ. ಸಹಕಾರ ಸಂಸ್ಥೆಗಳಲ್ಲಿ ಕೇವಲ ಸಾಲ ಕೊಡುವ ಹಾಗೂ ಸಾಲ ವಸೂಲಿ ಮಾಡುವ ವ್ಯವಹಾರ ಸಾಲದು. ಸದಸ್ಯರಿಗೆ ಅನೇಕ ರೀತಿಯ ಸೌಲಭ್ಯಗಳನ್ನು ನೀಡುವ ಬಡ್ಡಿಯೇತರ ಆದಾಯ ಗಳಿಸುವ ಸಾಮಾಜಿಕ ಬದ್ಧತೆಯುಳ್ಳ ಸಂಸ್ಥೆಗಳಾಗಿ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

ಕಲಬುರಗಿ ನಗರದ ಪ್ರಥಮ ಪ್ರಜೆ ಶ್ರೀ ಭೀಮರೆಡ್ಡಿ ಪಾಟೀಲ್ ಕುರಕುಂದ ಇವರು ಸಹಕಾರ ಧ್ವಜಾರೋಹಣ ನೆರವೇರಿಸಿದರು. ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಶೇಖರಗೌಡ ಮಾಲಿ ಪಾಟೀಲ್ ಇವರು ಸಂಯುಕ್ತ ಸಹಕಾರಿಯ ಪ್ರದರ್ಶನ ಮಳಿಗೆ ಉದ್ಘಾಟಿಸಿದರು. ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಶ್ರೀ ಧರ್ಮಸಿಂಗ್‌ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಪ್ರಾರಂಭದಲ್ಲಿ ಇತ್ತೀಚೆಗೆ ನಿಧನರಾದ ಶಾಸಕರು, ಸಹಕಾರಿ ಧುರೀಣರು, ಬೀದರ್ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಹಾಗೂ ಆತ್ಮಹತ್ಯೆ ಮಾಡಿಕೊಂಡ ರೈತರುಗಳ ಆತ್ಮಕ್ಕೆ ಶಾಂತಿಕೋರಿ ಮೌನ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಅತಿಥಿ ಗಣ್ಯರಿಗೆ, ಅಧಿಕಾರಿಗಳಿಗೆ ಹಾಗೂ ಜಿಲ್ಲೆಯ ಉತ್ತಮ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ, ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ, ಟಿ.ಎ.ಪಿ.ಸಿ.ಎಮ್.ಎಸ್. ಹಾಗೂ ಪಿಸಿಎಆರ್‌ಡಿಬಿ ಗಳಿಗೆ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಸಿದ್ಧರಾಮರೆಡ್ಡಿ ಪಾಟೀಲರವರು ಹಾಗೂ



**ಕಲಬುರಗಿಯಲ್ಲಿ 62ನೇ ಸಹಕಾರ ಸಪ್ತಾಹದ ಸಮಾರೋಪ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯಿಂದ ವ್ಯವಸ್ಥೆ ಮಾಡಲಾಗಿದ್ದ ಪ್ರದರ್ಶಿನಿಯಲ್ಲಿ ಗಣ್ಯರ ಉಪಸ್ಥಿತಿ**

ಸಹಕಾರ ಮಹಾಮಂಡಳದ ರಾಯಚೂರು ನಿರ್ದೇಶಕರಾದ ಶ್ರೀ ವಿಜಯಕುಮಾರ ಪಾಟೀಲ್, ಜಿಲ್ಲಾ ಯೂನಿಯನ್ ಅಧ್ಯಕ್ಷರಾದ ಶ್ರೀ ವೀರಾರೆಡ್ಡಿ ಪಾಟೀಲ್ ಹಾಗೂ ಕಲಬುರಗಿ ವಿಭಾಗೀಯ ಜಂಟಿ ನಿಬಂಧಕರಾದ ಶ್ರೀ ಅರಳಿ ಸೂರ್ಯಕಾಂತ್, ಜಿಲ್ಲಾ ಸಹಕಾರಿಗಳ ಉಪನಿಬಂಧಕರಾದ ಶ್ರೀ ಫೆರೋಜ, ಡಿ.ಸಿ.ಸಿ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ವೆಂಕಟೇಶಪ್ಪ ರವರು ಮುಂದಾಳತ್ವ ವಹಿಸಿ, ಕಾರ್ಯಕ್ರಮ ಆಯೋಜಿಸಿದರು.

ಮಹಿಳಾ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀಮತಿ ಶಕುಂತಲಾ ಬೆಲ್ದಾಳೆ, ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಕೆ.ಎ.ವೆಂಕಟೇಶ್, ರಾಯಚೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ರಾಜಶೇಖರ ನಾಯಕ, ಜಿಲ್ಲೆಯ ಅನೇಕ ಸಹಕಾರಿ ಮುಖಂಡರು, ಅಧಿಕಾರಿಗಳು, ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್, ನಿರ್ದೇಶಕರುಗಳಾದ ಶ್ರೀ ಶಾಂತಿನಾಥ ಪಂಡಿತ, ಶ್ರೀ ವೈ.ಟಿ.ಪಾಟೀಲ್, ಶ್ರೀ ಜಿ.ಎನ್.ಪಾಟೀಲ್, ಶ್ರೀ ಜಿ.ಎಸ್.ಮಹಾಬಲ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ಮತ್ತು ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳ ಅನೇಕ ಸಹಕಾರಿ ಸಂಸ್ಥೆಗಳ 4–5 ಸಾವಿರ ಸಹಕಾರಿ ಸಂಸ್ಥೆಗಳ ಪ್ರತಿನಿಧಿಗಳು ಅಧಿಕಾರಿಗಳು ಭಾಗವಹಿಸಿದ್ದರು.

## 62ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಂದರ್ಭದಲ್ಲಿ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರು



ಸಹಕಾರ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಹಿರಿಯ ಸಹಕಾರಿಗಳಾದ ಶ್ರೀ ಪುಂಡಲೀಕ ಹಾಲಂಬಿ, ಶ್ರೀ ಬಸವರಾಜ ಪಾಟೀಲ್ ಶಾವಂತಗೇರಿ, ಶ್ರೀ ರಂಗನಗೌಡ ಶಿವನಗೌಡಪಾಟೀಲ್, ಶ್ರೀ ಕೆ.ಎಸ್.ಶಾಂತರಾಮ್, ಶ್ರೀ ಕೆ.ಗುಡಿಯಪ್ಪ, ಶ್ರೀ ಎಸ್.ಎನ್. ಕೃಷ್ಣಯ್ಯ ಅವರುಗಳಿಗೆ ಮುಖ್ಯಮಂತ್ರಿಗಳು ಸಹಕಾರ ರತ್ನ ಪ್ರಶಸ್ತಿ ವಿತರಿಸಿ, ಸನ್ಮಾನಿಸಿ ಗೌರವಿಸಿದರು. ಶ್ರೀ ರಂಗನಗೌಡ ಶಿವನಗೌಡ ಪಾಟೀಲ್ ಹಾಗೂ ಶ್ರೀ ಕೆ.ಎಸ್. ಶಾಂತರಾಮ್ ಅವರುಗಳು ಸೌಹಾರ್ದ ಸಹಕಾರಿ ಪದಾಧಿಕಾರಿಗಳಾಗಿದ್ದಾರೆ.

# ಮೈಸೂರಿನಲ್ಲಿ 62ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆ




ದಿನಾಂಕ : 14.11.2015ರಂದು ಬೆಳಿಗ್ಗೆ 8.00 ಗಂಟೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮೈಸೂರು ವಿಭಾಗೀಯ ಕಛೇರಿಯಲ್ಲಿ 62ನೇ ಅಖಿಲ ಭಾರತ ಸಹಕಾರ ಸಪ್ತಾಹದ ಧ್ವಜಾರೋಹಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸಹಕಾರ ಧ್ವಜಾರೋಹಣವನ್ನು ಶ್ರೀ ಅರಮನೆ ಜಪದಕಟ್ಟೆ ಮಠದ ಶ್ರೀ ಷ.ಬ್ರ.ಡಾ. ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ನೆರವೇರಿಸಿ, ತಮ್ಮ ಆಶೀರ್ವಚನದಲ್ಲಿ ಸಹಕಾರ ಧ್ವಜವನ್ನು ಹಾರಿಸುವುದರ ಮೂಲಕ ಸಪ್ತಾಹವನ್ನು ರಾಜ್ಯದಾದ್ಯಂತ ಆಚರಿಸಲಾಗುತ್ತಿದೆ.

ದೇಶಕ್ಕೆ ಆರ್ಥಿಕ ಭದ್ರ ಬುನಾದಿ ಹಾಕಿರುವಂತಹ ಕ್ಷೇತ್ರವೇ ಸಹಕಾರ ಕ್ಷೇತ್ರ. ಸಹಕಾರವಿಲ್ಲದೇ ಅಭಿವೃದ್ಧಿಯೇ ಇಲ್ಲ ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್‌ರವರು ಮಾತನಾಡಿ, ತಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ ಎನ್ನುವ ತತ್ವದಡಿಯಲ್ಲಿ ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಎನ್ನುವಂತೆ ಸಹಕಾರ ಕ್ಷೇತ್ರದ ಮೂಲಕ ಸಮಾಜದ ಏಳಿಗೆಗಾಗಿ ಪ್ರಯತ್ನಿಸಬೇಕು ಎಂದು ತಿಳಿಸಿದರು. ಸಹಕಾರ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಮೈಸೂರು ನಗರದ ವಿವಿಧ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು ಮತ್ತು ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು.

## 62ನೇ ಅಖಿಲ ಭಾರತ ಸಹಕಾರ ಸಪ್ತಾಹದ ವಸ್ತು ಪ್ರದರ್ಶನದಲ್ಲಿ ಶ್ರೀ ಹೆಚ್.ಎಸ್. ಮಹದೇವಪ್ರಸಾದ್‌ರಿಂದ ಸಂಯುಕ್ತ ಸಹಕಾರಿಯ ಪ್ರಕಟಣೆಗಳ ಪುಸ್ತಕ ಮಳಿಗೆಯ ಉದ್ಘಾಟನೆ

ದಿನಾಂಕ : 14.11.2015 ರಂದು ಮೈಸೂರಿನ ಕಲಾಮಂದಿರದಲ್ಲಿ 62ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ಆಯೋಜಿಸಲಾಗಿದ್ದ ವಸ್ತು ಪ್ರದರ್ಶನದಲ್ಲಿ ಸಂಯುಕ್ತ ಸಹಕಾರಿಯ ಪ್ರಕಟಣೆಗಳ ಪುಸ್ತಕ ಮಳಿಗೆಯನ್ನು ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರಾದ ಶ್ರೀ ಹೆಚ್.ಎಸ್. ಮಹದೇವಪ್ರಸಾದ್‌ರವರು ಉದ್ಘಾಟಿಸಿದರು. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಶೇಖರಗೌಡ ಮಾಲಿಪಾಟೀಲ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್, ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಸ್.ಚಂದ್ರಶೇಖರ್, ಸಹಕಾರಿಗಳ ಜಂಟಿ ನಿಬಂಧಕರಾದ ಶ್ರೀಮತಿ ಆಶಾ ಹಾಗೂ ಸಂಯುಕ್ತ ಸಹಕಾರಿಯ ವಿಭಾಗೀಯ ಅಧಿಕಾರಿಗಳಾದ ಶ್ರೀ ಶಿವಕುಮಾರ ಬಿರಾದಾರ ಸೇರಿದಂತೆ ಅನೇಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



## ಡಿಸೆಂಬರ್ ಮಾಹೆಯ ಕಾರ್ಯಕ್ರಮಗಳು

| | |
|---|---|
| ದಿನಾಂಕ : 03-12-2015 ರಿಂದ 12-12-2015ರವರೆಗೆ | ಕೃಷಿ ವಿಶ್ವವಿದ್ಯಾಲಯ, ರಾಯಚೂರು ಇಲ್ಲಿ 10 ದಿನಗಳ ವ್ಯಕ್ತಿತ್ವ ವಿಕಸ ತರಬೇತಿ ಶಿಬಿರ'. ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ. |
| ದಿನಾಂಕ : 04-12-2015 | ಕೃಷಿ ವಿಶ್ವವಿದ್ಯಾಲಯ, ರಾಯಚೂರು ಇಲ್ಲಿ ಸೌಹಾರ್ದ ಸಹಕಾರಿಗಳ ಉಪಸಿಬ್ಬಂದಿಯವರಿಗಾಗಿ 'ವೃತ್ತಿ ಸಂಸ್ಕೃತಿ ತರಬೇತಿ' ಕಾರ್ಯಕ್ರಮ. |
| ದಿನಾಂಕ : 07-12-2015 | ಕೃಷಿ ವಿಶ್ವವಿದ್ಯಾಲಯ, ರಾಯಚೂರು ಇಲ್ಲಿ 'ಯುವಕರು ಹಾಗೂ ಸಹಕಾರ ಸಹಕಾರ' ಕುರಿತು ಸಂವಾದ ಕಾರ್ಯಕ್ರಮ. |
| ದಿನಾಂಕ : 10 ಮತ್ತು 11-12-2015 | ಬೆಂಗಳೂರಿನಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಿಗಾಗಿ 'ಆಡಳಿತ ಪರಿಣಿತಿ ತರಬೇತಿ' ಕಾರ್ಯಕ್ರಮ. |

## ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯ ಆಯೋಜನೆಯ ವಿವರಗಳು

| ದಿನಾಂಕ | ಬೆಳಗಾವಿ ವಿಭಾಗ : ಭಾಗವಹಿಸಬೇಕಾದ ಸೌಹಾರ್ದ ಸಹಕಾರಿಗಳು | ಸ್ಥಳ |
|---|---|---|
| 16.12.2015 | ವಿಜಯಪುರ & ಹುನಗುಂದ ತಾಲ್ಲೂಕು. | ವಿಜಯಪುರ |
| 17.12.2015 | ಬಸವನ ಬಾಗೇವಾಡಿ, ಮುದ್ದೇಬಿಹಾಳ, ಸಿಂದಗಿ, ಇಂಡಿ. | ವಿಜಯಪುರ |
| 18.12.2015 | ಬಾಗಲಕೋಟೆ - ಹುನಗುಂದ ತಾಲ್ಲೂಕು ಹೊರತುಪಡಿಸಿ. | ಜಮಖಂಡಿ |
| 21.12.2015 | ಅಥಣಿ, ಚಿಕ್ಕೋಡಿ, ರಾಯಭಾಗ ತಾಲ್ಲೂಕು. | ಚಿಕ್ಕೋಡಿ |
| 22.12.2015 | ಬೈಲಹೊಂಗಲ, ರಾಮದುರ್ಗಾ, ಸವದತ್ತಿ, ಗೋಕಾಕ ತಾಲೂಕು. | ಗೋಕಾಕ |
| 23.12.2015 | ಹುಕ್ಕೇರಿ. | ಬೆಳಗಾವಿ |
| 28.12.2015 | ಹಾವೇರಿ ಜಿಲ್ಲೆ. | ಹಾವೇರಿ |
| 29.12.2015 | ಬೆಳಗಾವಿ & ಖಾನಾಪುರ ತಾಲ್ಲೂಕು. | ಬೆಳಗಾವಿ |
| 29.12.2015 | ಗದಗ, ಧಾರವಾಡ ಜಿಲ್ಲೆ. | ಹುಬ್ಬಳ್ಳಿ |
| 30.12.2015 | ಉತ್ತರ ಕನ್ನಡ ಜಿಲ್ಲೆ. | ಶಿರಸಿ |
| | **ಕಲಬುರಗಿ ವಿಭಾಗ : ಭಾಗವಹಿಸಬೇಕಾದ ಸೌಹಾರ್ದ ಸಹಕಾರಿಗಳು** | |
| 12.12.2015 | ರಾಯಚೂರು. | ರಾಯಚೂರು |
| 17.12.2015 | ಕಲಬುರ್ಗಿ ಮತ್ತು ಯಾದಗಿರಿ. | ಕಲಬುರ್ಗಿ |
| 18.12.2015 | ಬೀದರ್. | ಬೀದರ್ |
| 22.12.2015 | ಬಳ್ಳಾರಿ. | ಹೊಸಪೇಟೆ |
| 23.12.2015 | ಕೊಪ್ಪಳ. | ಗಂಗಾವತಿ |
| | **ಬೆಂಗಳೂರು ವಿಭಾಗ : ಭಾಗವಹಿಸಬೇಕಾದ ಸೌಹಾರ್ದ ಸಹಕಾರಿಗಳು** | |
| 23.12.2015 | ಬೆಂಗಳೂರು ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆ. | ಬೆಂಗಳೂರು. |
| 22.12.2015 | ಬೆಂಗಳೂರು, ಕೋಲಾರ, ಚಿಕ್ಕಬಳ್ಳಾಪುರ ಹಾಗೂ ರಾಮನಗರ ಜಿಲ್ಲೆ. | ಬೆಂಗಳೂರು. |
| 18.12.2015 | ತುಮಕೂರು ಜಿಲ್ಲೆ. | ತುಮಕೂರು. |
| 19.12.2015 | ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆ. | ದಾವಣಗೆರೆ. |
| 30.12.2015 | ಶಿವಮೊಗ್ಗ ಜಿಲ್ಲೆ. | ಶಿವಮೊಗ್ಗ. |
| | **ಮೈಸೂರು ವಿಭಾಗ : ಭಾಗವಹಿಸಬೇಕಾದ ಸೌಹಾರ್ದ ಸಹಕಾರಿಗಳು** | |
| 14.12.2015 | ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಜಿಲ್ಲೆ. | ಮೈಸೂರು. |
| 17.12.2015 | ಹಾಸನ & ಚಿಕ್ಕಮಗಳೂರು ಜಿಲ್ಲೆ. | ಚಿಕ್ಕಮಗಳೂರು. |
| 18.12.2015 | ಮಂಗಳೂರು ಜಿಲ್ಲೆ. | ಮಂಗಳೂರು. |
| 19.12.2015 | ಉಡುಪಿ ಜಿಲ್ಲೆ | ಉಡುಪಿ. |

## ಸಂಯುಕ್ತ ಸಹಕಾರಿಯ ಅಧಿಕಾರಿಗಳ ಕೆಲಸ ಸ್ಮಾರ್ಟ್ ಮತ್ತು ಸ್ಪೀಡ್ ಆಗಬೇಕು – ಶ್ರೀ ಗುರುನಾಥ ಜಾಂತಿಕರ



ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ನೇತೃತ್ವ ವಹಿಸಿರುವ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧಿಕಾರಿಗಳ ಕಾರ್ಯ ಸ್ಮಾರ್ಟ್ ಮತ್ತು ಸ್ಪೀಡ್ ಆಗಿರಬೇಕು ಎಂದು ಸಂಯುಕ್ತ ಸಹಕಾರಿಯ ಅಧಿಕಾರಿಗಳ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ರಾಜ್ಯದಲ್ಲಿ 3400 ಸೌಹಾರ್ದ ಸಹಕಾರಿಗಳಿವೆ. ಇವೆಲ್ಲವುಗಳ ಉತ್ತಮ ಕಾರ್ಯಾಚರಣೆಗೆ ಅಗತ್ಯವಾಗುವ ಮಾರ್ಗದರ್ಶನವನ್ನು ಸಂಯುಕ್ತ ಸಹಕಾರಿಯ ಅಧಿಕಾರಿಗಳು ಮಾಡಬೇಕು. ರಾಜ್ಯದಲ್ಲಿ ಕಂದಾಯ ವಿಭಾಗಕ್ಕೆ ಒಂದರಂತೆ 4 ವಿಭಾಗೀಯ ಕಛೇರಿಗಳನ್ನು ತೆರೆಯಲಾಗಿದೆ. ಪ್ರತಿ 3 ಜಿಲ್ಲೆಗಳಿಗೆ ಒಬ್ಬರಂತೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳನ್ನು ನೇಮಿಸಲಾಗಿದೆ. ಎಲ್ಲರಿಗೂ ಉತ್ತಮ ತರಬೇತಿ ನೀಡಲಾಗಿದೆ. ಪ್ರತಿಯೊಬ್ಬ ಅಧಿಕಾರಿಯು ಸೌಹಾರ್ದ ಸಹಕಾರಿಗಳ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಬೇಕು. ಎಲ್ಲದಕ್ಕೂ ಕೇಂದ್ರ ಕಛೇರಿಯ ಮೇಲೆ ಅವಲಂಬಿತರಾಗಬಾರದು.

ಸ್ವಯಂ ಮಾಹಿತಿ ಕೇಂದ್ರದಂತಿರಬೇಕು. ತಮ್ಮ ಕಾರ್ಯವ್ಯಾಪ್ತಿಯ ಸಹಕಾರಿ ಸಂಸ್ಥೆಗಳ ಸೌಹಾರ್ದ ಸಹಕಾರಿಗಳ ಅಗತ್ಯವಾದ ಎಲ್ಲಾ ಮಾಹಿತಿಗಳನ್ನು ಹೊಂದಿರಬೇಕು. ಸೌಹಾರ್ದ ಸಹಕಾರಿಗಳ ಸ್ನೇಹಿತರಾಗಿ, ಮಾರ್ಗದರ್ಶಿಯಾಗಿ, ವಿಷಯ ತಜ್ಞರಾಗಿ, ಕಾರ್ಯಕ್ಷೇತ್ರದಲ್ಲಿ ಸಹಕಾರಿ ಕ್ಷೇತ್ರದ ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯನಿರ್ವಹಿಸಲು ಸೂಚಿಸಿದರು.

## ಸೌಹಾರ್ದ ಸಹಕಾರಿಗಳ ವಿಶ್ವಾಸಾರ್ಹತೆ ಹೆಚ್ಚಿಸುವಂತೆ ಸೌಹಾರ್ದ ಸಹಕಾರಿ ದಿನ ಆಚರಣೆಯ ಕುರಿತು

ಪ್ರತಿ ವರ್ಷದಂತೆ ಜನವರಿ 01 ರಂದು ಸೌಹಾರ್ದ ಸಹಕಾರಿ ದಿನವನ್ನು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಉತ್ತಮ ರೀತಿಯಲ್ಲಿ ಆಚರಿಸಲು ಕೋರಿದೆ. ಸೌಹಾರ್ದ ಸಹಕಾರಿ ದಿನವನ್ನು ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದ ದಿನದ ಜ್ಞಾಪಕಾರ್ಥ ಮತ್ತು ಸೌಹಾರ್ದ ಸಹಕಾರಿಗಳ ಅಸ್ತಿತ್ವಕ್ಕೆ ಕಾರಣವಾದ ದಿನವೆಂದು ಆಚರಿಸಲಾಗುತ್ತಿದೆ.

ಈ ದಿನದಂದು ಸೌಹಾರ್ದ ಸಹಕಾರಿಗಳ ಅಸ್ತಿತ್ವವನ್ನು ಭದ್ರಗೊಳಿಸುವ ನಿಟ್ಟಿನಲ್ಲಿ ಅವಶ್ಯಕವಾದ ಪ್ರಚಾರ ಕಾರ್ಯಗಳನ್ನು ಹಮ್ಮಿಕೊಳ್ಳುವುದು ಅವಶ್ಯಕವೆನಿಸುತ್ತದೆ. ಸಭೆ, ಸಮಾರಂಭಗಳನ್ನು ಏರ್ಪಡಿಸಿ, ಹಿರಿಯ ಸಹಕಾರಿ ಗಣ್ಯರನ್ನು ಗೌರವಿಸುವುದು, ಸಹಕಾರಿಯ ವ್ಯಾಪ್ತಿಯ ಶಾಲಾ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳುವುದು, ಸಹಕಾರಿಯ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪರಿಣಿತರಿಂದ ವಿವಿಧ ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ಚರ್ಚಾಗೋಷ್ಠಿಗಳನ್ನು ಏರ್ಪಡಿಸುವುದು, ವಿವಿಧ ಕ್ರೀಡೆಗಳನ್ನು ಏರ್ಪಡಿಸುವುದು, ಸಹಕಾರ ಕುರಿತಾದ ಜಾಗೃತಿಯನ್ನು ಮೂಡಿಸುವ ಜಾಥಾ ನಡೆಸುವುದು, ಪರಿಸರ ಜಾಗೃತಿ ಮೂಡಿಸುವುದು, ರಕ್ತದಾನ ಶಿಬಿರಗಳನ್ನು ಏರ್ಪಡಿಸುವುದು, ವ್ಯಾಪ್ತಿಯ ಆಸ್ಪತ್ರೆಗಳಲ್ಲಿನ ರೋಗಿಗಳ ಆರೋಗ್ಯ ಸುಧಾರಣೆಗೆ ಹಣ್ಣು ಹಂಪಲುಗಳನ್ನು ವಿತರಿಸುವುದು ಇತ್ಯಾದಿ ಹಲವು ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ಸೌಹಾರ್ದ ಸಹಕಾರಿ ಕ್ಷೇತ್ರದ ಅಸ್ತಿತ್ವವನ್ನು ಹಾಗೂ ವಿಶ್ವಾಸಾರ್ಹತೆಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕ್ರಮವಿಡಲು ತಿಳಿಸಿದೆ.

## ಸಹಕಾರ ಭಾರತಿಯ ಸಮಾವೇಶದಲ್ಲಿ ಸಂಯುಕ್ತ ಸಹಕಾರಿಯಿಂದ ಪ್ರದರ್ಶಿನಿ

ದಿನಾಂಕ : 21, 22 ನವೆಂಬರ್ 2015 ರಂದು ಅಹ್ಮದಾಬಾದ್‌ನಲ್ಲಿ ಆಯೋಜಿಸಲಾಗಿದ್ದ ಸಹಕಾರ ಭಾರತಿಯ ಸಮಾವೇಶದಲ್ಲಿ ಸಂಯುಕ್ತ ಸಹಕಾರಿಯವತಿಯಿಂದ ಪ್ರದರ್ಶಿನಿಯನ್ನು ವ್ಯವಸ್ಥೆ ಮಾಡಲಾಗಿತ್ತು. ಪ್ರದರ್ಶಿನಿಯನ್ನು ಅಮೂಲ್ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಜೀತುಭಾಯಿ ಪಟೇಲರವರು ಉದ್ಘಾಟಿಸಿದ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ಹಾಗೂ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್ ಮತ್ತು ಕ್ಯಾಂಪ್ಕೋ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್.ಆರ್.ಸತೀಶ್‌ಚಂದ್ರ, ಮತ್ತಿತರು ಉಪಸ್ಥಿತರಿದ್ದರು. ಸಂಯುಕ್ತ ಸಹಕಾರಿಯ ಈ ಪ್ರದರ್ಶಿನಿಗೆ ಗುಜರಾತ್ ರಾಜ್ಯ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಅಜಯಭಾಯಿ. ಹೆಚ್.ಪಟೇಲ್, ಗೋವಾ ರಾಜ್ಯದ ಮಾಜಿ ಸಹಕಾರ ಮಂತ್ರಿಗಳಾದ ಶ್ರೀ



ವೆಲಿಪ್, ಶ್ರೀ ಜ್ಯೋತೀಂದ್ರಭಾಯಿ ಮೆಹತಾ, ಶ್ರೀ ಸತೀಶ ಮರಾಠೆ, ಶ್ರೀ ಕೊಂಕೋಡಿ ಪದ್ಮನಾಭ, ಶ್ರೀ ಎಮ್.ಜಿ.ಪಾಟೀಲ್, ಶ್ರೀ ರಮೇಶ ವೈದ್ಯ ಮುಂತಾದ ಅನೇಕ ರಾಷ್ಟ್ರೀಯ ಹಾಗೂ ರಾಜ್ಯದ ಗಣ್ಯ ಸಹಕಾರಿಗಳು ಭೇಟಿ ನೀಡಿ, ಕರ್ನಾಟಕ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

## ಕಲಬುರಗಿ ನಗರದ ಸಹಕಾರಿಗಳ ಕಾರ್ಯಚಟುವಟಿಕೆಗಳ ಬಗ್ಗೆ ಮೆಚ್ಚುಗೆ

ದಿನಾಂಕ : 20.11.2015 ರಂದು 62ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮದ ಸಮಾರೋಪ ಸಮಾರಂಭ ಕಾರ್ಯಕ್ರಮದ ಅಂಗವಾಗಿ ಕಲಬುರಗಿ ನಗರಕ್ಕೆ ಆಗಮಿಸಿದ್ದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ಉಪಾಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್ ಮತ್ತು ನಿರ್ದೇಶಕರಾದ ಶ್ರೀ ಜಿ.ಎಸ್.ಮಹಾಬಲ ರವರು ಕಲಬುರಗಿ ನಗರದಲ್ಲಿರುವ ಶ್ರೀ ಶರಣ ಶಬರೀಶ ಸೌಹಾರ್ದ ಪತ್ತಿನ ಸಹಕಾರಿ ನಿ., ಮತ್ತು ಸಿದ್ಧಿ ವಿನಾಯಕ ಸೌಹಾರ್ದ ಸಹಕಾರಿ ನಿ., ಸಹಕಾರಿಗಳಿಗೆ ಭೇಟಿ ನೀಡಿದರು.

ಸದರಿ ಸಹಕಾರಿಗಳ ಕಾರ್ಯಚಟುವಟಿಕೆಗಳ ಬಗ್ಗೆ ಸಮಾಲೋಚಿಸಿ, ಮೆಚ್ಚುಗೆ ವ್ಯಕ್ತಪಡಿಸಿದರು. ನಂತರ ಸಂಯುಕ್ತ



ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ಉಪಾಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್ ಮತ್ತು ನಿರ್ದೇಶಕರಾದ ಶ್ರೀ ಜಿ.ಎಸ್.ಮಹಾಬಲರವರಿಗೆ ಸನ್ಮಾನಿಸಲಾಯಿತು.



ದಿನಾಂಕ : 01.11.2015ರಂದು ಕನ್ನಡ ರಾಜ್ಯೋತ್ಸವದ ಅಂಗವಾಗಿ ಕಲಬುರಗಿ ವಿಭಾಗೀಯ ಕಛೇರಿಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಧ್ವಜಾರೋಹಣವನ್ನು ನೆರವೇರಿಸಿದರು.

ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಶಾಂತಿನಾಥ ಪಂಡಿತ, ಶ್ರೀ ವೈ.ಟಿ. ಪಾಟೀಲ, ಶ್ರೀಮತಿ ಮಂಜುಳಾ ಪಾಟೀಲ, ಶ್ರೀ ಕೆ.ಸಣ್ಣಸೂಗಪ್ಪ ಮತ್ತು ಶ್ರೀ ಆನಂದ ಎಲ್.ಎಸ್. ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲ್ ಮತ್ತು ವಿಭಾಗೀಯ ಅಧಿಕಾರಿಗಳಾದ ಶ್ರೀ ಸಂಜಯ ಕೋರಟಕರ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಇ-ಸ್ಟ್ಯಾಂಪಿಂಗ್ ಪೇಪರ್‌ನ ನಗದೀಕರಣದ ಅವಧಿ

ಯಾವುದೇ ಮೊತ್ತದ ಇ-ಸ್ಟ್ಯಾಂಪ್ ಪೇಪರ್‌ನ್ನು ರದ್ದುಪಡಿಸಬೇಕಾದರೆ ಆ ಇ-ಸ್ಟ್ಯಾಂಪ್ ಪೇಪರನ್ನು ಮುದ್ರಿತವಾದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಸದರಿ ಕಾರ್ಯವ್ಯಾಪ್ತಿಯ ಜಿಲ್ಲಾ ನೋಂದಣಾಧಿಕಾರಿಗೆ ನಗದೀಕರಣ ಮಾಡುವ ಅಧಿಕಾರವಿರುತ್ತದೆ. ಒಂದು ವರ್ಷದ ನಂತರದ ಅವಧಿಯ ಇ-ಸ್ಟ್ಯಾಂಪ್ ಪೇಪರ್‌ಗಳನ್ನು ರಾಜ್ಯ ಸರ್ಕಾರದ ಮುದ್ರಾಂಕ ಇಲಾಖೆಯ ನೋಂದಣಿ ಮಹಾ ಪರಿವೀಕ್ಷಕರು ಇವರಿಗೆ ನಗದೀಕರಣ ಮಾಡುವ ಅಧಿಕಾರವಿರುತ್ತದೆ.

## ವಿಶೇಷಾಧಿಕಾರಿಯ ನೇಮಕ

ಸೆವೆನ್ ಹಿಲ್ಸ್ ಸೌಹಾರ್ದ ಸಹಕಾರಿ ನಿ., ಮಾಲೂರು, ಕೋಲಾರ ಈ ಸೌಹಾರ್ದ ಸಹಕಾರಿಗೆ ಶ್ರೀ ವೈ.ಕುಮಾರ್, ಉಪಪ್ರಧಾನ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರನ್ನು ದಿನಾಂಕ 09 ನವೆಂಬರ್ 2015ರ ಸಂಯುಕ್ತ ಸಹಕಾರಿಯ ಆದೇಶದಂತೆ ವಿಶೇಷಾಧಿಕಾರಿಯಾಗಿ ನೇಮಕ ಮಾಡಲಾಗಿದೆ. ಸಹಕಾರಿಯ ಠೇವಣಿದಾರರು, ಸದಸ್ಯರು ಇವರನ್ನು ಮೊಬೈಲ್ ಸಂಖ್ಯೆ 8884466705ಯಲ್ಲಿ ಸಂಪರ್ಕಿಸಬಹುದಾಗಿದೆ.



ಶ್ರೀ ಅರಿಹಂತ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿ., ಬೋರಂಗಾವದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ರಾವಸಾಹೇಬ ಅಣ್ಣಾಸಾಹೇಬ ಪಾಟೀಲ ಇವರ ನೇತೃತ್ವದಲ್ಲಿ 62ನೇ ಅಖಿಲ ಭಾರತ ಸಹಕಾರ ಸಪ್ತಾಹ ದಿನಾಚರಣೆ.



ಶ್ರೀ ಕನ್ಯಕಾಪರಮೇಶ್ವರಿ ಸೌಹಾರ್ದ ಸಹಕಾರಿ ನಿ., ಚಿತ್ರದುರ್ಗ ಸಹಕಾರಿಯಲ್ಲಿ ದಿನಾಂಕ 14.11.2015ರಂದು 62ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಪಿ.ಎಸ್.ನಾಗರಾಜಶೆಟ್ಟಿ ಅವರಿಂದ ಸಹಕಾರಿ ಧ್ವಜಾರೋಹಣ.



**ಬೆಳಗಾವಿ :** 62ನೇ ಅಖಿಲ ಭಾರತ ಸಹಕಾರ ಸಪ್ತಾಹ ದಿನಾಚರಣೆಯನ್ನು ಜೊಲ್ಲೆ ಉದ್ಯೋಗ ಸಮೂಹದ ಪ್ರಾಂಗಣದಲ್ಲಿ ಸಂಸ್ಥಾಪಕರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆಯವರು ಧ್ವಜಾರೋಹಣ ಮಾಡುವುದರೊಂದಿಗೆ ಆಚರಿಸಲಾಯಿತು. ಈ ವೇಳೆಯಲ್ಲಿ ನಿಪ್ಪಾಣಿಯ ಶಾಸಕರಾದ ಶ್ರೀಮತಿ ಶಶಿಕಲಾ ಜೊಲ್ಲೆ ಉಪಸ್ಥಿತರಿದ್ದರು. ಶ್ರೀ ಬೀರೇಶ್ವರ ಕೋ–ಆಪ್ ಕ್ರೆಡಿಟ್ ಸೊಸೈಟಿಯ ಅಧ್ಯಕ್ಷರಾದ ಶ್ರೀ ಜಯಾನಂದ ಜಾಧವ, ಉಪಾಧ್ಯಕ್ಷರಾದ ಶ್ರೀ ಯಾಸೀನ ತಾಂಬೂಳಿ, ಪ್ರಧಾನ ವ್ಯವಸ್ಥಾಪಕರಾದ ಶ್ರೀ ರವೀಂದ್ರ ಚೌಗಲಾ, ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ದಿನಕರ ಪೇಟಕರ್ ಹಾಗೂ ಮುಂತಾದವರು ಉಪಸ್ಥಿತರಿದ್ದರು.



ಶ್ರೀ ಕನ್ನಿಕಾಪರಮೇಶ್ವರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು ಸಹಕಾರಿ ವತಿಯಿಂದ ಸುಲ್ತಾನಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಹಕಾರ ಸಪ್ತಾಹ ದಿನಾಚರಣೆ ಹಾಗೂ ಮಕ್ಕಳ ದಿನಾಚರಣೆಯನ್ನು ಆಚರಿಸಲಾಯಿತು. ಶಾಲೆಯ ಮಕ್ಕಳಿಗೆ ವಿವಿಧ ಆಟಗಳನ್ನು ಏರ್ಪಡಿಸಲಾಗಿತ್ತು. ಮಕ್ಕಳಿಗೆ ಸಿಹಿ ಮತ್ತು ಬಹುಮಾನಗಳನ್ನು ವಿತರಿಸಲಾಯಿತು.



ಶ್ರೀ ಮಹಾದೇವ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ ಸಹಕಾರಿಯಲ್ಲಿ ನವೆಂಬರ್ 14ರಂದು ಅಖಿಲ ಭಾರತ ಸಹಕಾರ ಸಪ್ತಾಹ ದಿನಾಚರಣೆ.

# ಸದಸ್ಯರ ಆಶೋತ್ತರಗಳನ್ನು ಈಡೇರಿಸುವಲ್ಲಿ ಸಹಕಾರಿ ಸಂಸ್ಥೆಗಳು ಹೆಚ್ಚಿನ ಆಸಕ್ತಿ ಹೊಂದಲಿ – ಶ್ರೀ ಭಾಸ್ಕರ ಹೆಗಡೆ ಕಾಗೇರಿ

**ಶಿರಸಿ :** ಸಹಕಾರಿಯ ಸದಸ್ಯರಾದವರು ತಮ್ಮ ಸಕ್ರಿಯತೆಯನ್ನು ಚುರುಕುಗೊಳಿಸಿ, ಸಹಕಾರಿಯ ಲಾಭ ಪಡೆಯಲು ಮುಂದಾಗಬೇಕು ಎಂದು ಸಂಯುಕ್ತ ಸಹಕಾರಿಯ ನಿರ್ದೇಶಕರು, ಕೆ.ಡಿ.ಸಿ.ಸಿ. ಬ್ಯಾಂಕಿನ ಉಪಾಧ್ಯಕ್ಷರೂ ಆದ ಶ್ರೀ ಭಾಸ್ಕರ ಹೆಗಡೆ ಕಾಗೇರಿಯವರು ಅಭಿಪ್ರಾಯಪಟ್ಟರು.

ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿ ಸಂಸ್ಥೆಯ ಪ್ರಧಾನ ಕಛೇರಿಯಲ್ಲಿ ಶೇರು ಸರ್ಟಿಫಿಕೇಟ್ ಬಿಡುಗಡೆಗೊಳಿಸಿ ಮಾತನಾಡಿದ ಅವರು ಅಭಿವೃದ್ಧಿ ಕ್ಷೇತ್ರದಲ್ಲಿ ವಿಶ್ವಾಸಾರ್ಹತೆ ಹಾಗೂ ಗುಣಮಟ್ಟದ ಸೇವೆಯೊಂದಿಗೆ ಗುರುತಿಸಿಕೊಂಡ ಸ್ಕೊಡ್‌ವೆಸ್ ಸಂಸ್ಥೆ ಸಹಕಾರಿ ಕ್ಷೇತ್ರಕ್ಕೂ ಕಾಲಿಟ್ಟಿದ್ದನ್ನು ಪ್ರಶಂಸಿದ ಅವರು ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿ ಸಂಸ್ಥೆಯನ್ನು ಸ್ಥಾಪಿಸಿ, ಜಿಲ್ಲೆಯಾದ್ಯಂತ ದೊಡ್ಡ ಪ್ರಮಾಣದಲ್ಲಿ ಆರ್ಥಿಕವಾಗಿ ಹಿಂದುಳಿದ ಮಹಿಳಾ ಸಮೂಹವನ್ನು ಸಹಕಾರಿ ಕ್ಷೇತ್ರಕ್ಕೆ ಕರೆ ತರುತ್ತಿರುವ ಕಾರ್ಯ ಅಭಿನಂದನಾರ್ಹ ಎಂದರು.

ಅಧ್ಯಕ್ಷತೆ ವಹಿಸಿದ್ದ ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿ ನಿಯಮಿತದ ಅಧ್ಯಕ್ಷರಾದ ಶ್ರೀಮತಿ ಸರಸ್ವತಿ ಎನ್. ರವಿಯವರು ಮಾತನಾಡಿ ಕೇವಲ ಒಂದು ತಿಂಗಳ ಅವಧಿಯಲ್ಲಿ ಮೂರು ಸಾವಿರ ಮಹಿಳೆಯರು ಸದಸ್ಯತ್ವ ಪಡೆದಿದ್ದು, ಮುಂದಿನ ದಿನಗಳಲ್ಲಿ



ಜಿಲ್ಲೆಯಾದ್ಯಂತ ಶಾಖೆಗಳನ್ನು ಆರಂಭಿಸಿ, ಕನಿಷ್ಠ 3 ಲಕ್ಷಕ್ಕೂ ಹೆಚ್ಚು ಸದಸ್ಯತ್ವವನ್ನು ಹೊಂದುವಂತೆ ಮಾಡಲು ಉದ್ದೇಶಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಸ್ಕೊಡ್‌ವೆಸ್ ಸಂಸ್ಥೆಯ ಕಾರ್ಯದರ್ಶಿಯಾದ ಶ್ರೀ ವೆಂಕಟೇಶ್ ನಾಯ್ಕ, ವ್ಯವಸ್ಥಾಪಕರಾದ ಶ್ರೀ ಗಣಪತಿ ಶೆಟ್ಟಿ, ಉಪಾಧ್ಯಕ್ಷರಾದ ಹೇಮಲತಾ ಓಗುಲೆ, ಸವಿತಾ ಗೌಡ, ಲತಾ ನಾಯ್ಕ ಉಪಸ್ಥಿತರಿದ್ದರು. ಸ್ಕೊಡ್‌ವೆಸ್ ಸಂಸ್ಥೆಯ ಜಿಲ್ಲಾ ಸಂಯೋಜಕರಾದ ಶ್ರೀ ಗಣಪತಿ ನಾಯ್ಕ ಸ್ವಾಗತವನ್ನು ಹಾಗೂ ನಿರ್ದೇಶಕರಾದ ಶೃತಿ ಶೇಟ್ ಕಾರ್ಯಕ್ರಮವನ್ನು ನಿರೂಪಿಸಿ, ವಂದಿಸಿದರು.



ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್ ಲಿಮಿಟೆಡ್ ಸಹಕಾರಿಯ 22ನೇ ಶಾಖಾ ಕಛೇರಿಯನ್ನು ಬೆಂಗಳೂರಿನ ವಿಲ್ಸನ್ ಗಾರ್ಡನ್‌ನಲ್ಲಿ ಮಹಾನಗರ ಪಾಲಿಕೆಯ ಮೇಯರ್ ಶ್ರೀ ಮಂಜುನಾಥ ರೆಡ್ಡಿಯವರು ಉದ್ಘಾಟಿಸಿದರು.




ಶ್ರೀ ಶರಣಬಸವೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಹಳಿಂಗಳಿ ಸಹಕಾರಿಯ ಚಿಕ್ಕಪಡಸಲಗಿ ಶಾಖೆಯ ಪ್ರಾರಂಭೋತ್ಸವ.

# ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ 13ನೇ ಶಾಖೆ ಕೊಡಗು ಜಿಲ್ಲೆಯ ವಿರಾಜಪೇಟೆಯಲ್ಲಿ ಶುಭಾರಂಭ



**ಪುತ್ತೂರು** : ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ 13ನೇ ಶಾಖೆಯು ದಿನಾಂಕ 30.11.2015 ರಂದು ಕೊಡಗು ಜಿಲ್ಲೆಯ ವಿರಾಜಪೇಟೆಯ ಗೋಣಿಕೊಪ್ಪ ರಸ್ತೆಯಲ್ಲಿರುವ "ಹಫೀಝಾ" ಕಾಂಪ್ಲೆಕ್ಸ್‌ನ ಮೊದಲನೇ ಮಹಡಿಯಲ್ಲಿ ಶುಭಾರಂಭ ಗೊಂಡಿತು. ನೂತನ ಶಾಖೆಯನ್ನು ಉದ್ಘಾಟಿಸಿ, ಮಾತಾನಾಡಿದ ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಬಿ.ಡಿ. ಮಂಜುನಾಥ್‌ರವರು ಸಮಾಜಮುಖಿ ಚಿಂತನೆಯ ಬ್ಯಾಂಕ್‌ಗಳು ನಿರ್ಮಾಣವಾಗಬೇಕು, ಕೇವಲ ವ್ಯವಹಾರ ವಿಸ್ತರಣೆ ಮಾತ್ರ ಉದೇಶವಾಗಿರದೇ ಸಾಮಾಜಿಕ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಬೇಕೆಂದರು. ಕಂಪ್ಯೂಟರೀಕರಣವನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಂ.ಕೆ.ಸೋಮಯ್ಯರವರು ಉದ್ಘಾಟಿಸಿದರು. ಭದ್ರತಾ ಕೊಠಡಿಯನ್ನು ಕೊಡಗು ಮುಸ್ಲಿಂ ಪತ್ತಿನ ಸಹಕಾರಿ ಸಂಘ ನಿ., ವಿರಾಜಪೇಟೆಯ ಅಧ್ಯಕ್ಷರಾದ ಶ್ರೀ ಬಿ ಆರ್ ಮೊಹಮ್ಮದ್ ಶುಹೇಬ್‌ರವರು ನೆರವೇರಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್‌ರವರು ಮಾತನಾಡುತ್ತಾ ಸರಸ್ವತಿ ಸಹಕಾರಿ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಸರಿಸಮಾನವಾಗಿ ಬೆಳೆದು ಬಂದಿದೆ. ಲಾಭ ಮಾತ್ರ ಉದ್ದೇಶವಿಲ್ಲದೇ ಸಾಮಾಜಿಕ ಸೇವೆಯ ಮೂಲಕ ಜನರಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದೆ ಎಂದರು.

ವೇದಿಕೆಯಲ್ಲಿ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಭೀಮಯ್ಯ, ಶಾಖಾ ಕಟ್ಟಡದ ಮಾಲೀಕರಾದ ಶ್ರೀ ನಿಸಾರ್ ಅಹಮ್ಮದ್, ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎಂ ಅನಂತಕೃಷ್ಣ ನಾಯಕ್, ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ ಎ. ಉಪಸ್ಥಿತರಿದ್ದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್ ಆರ್ ಸತೀಶ್ಚಂದ್ರರವರು ಸ್ವಾಗತಿಸಿ, ಪ್ರಾಸ್ತಾವಿಕ ಮಾತುಗಳನ್ನಾಡಿದರು. ಸೈಂಟ್ ಆನ್ಸ್ ವಿದ್ಯಾರ್ಥಿನಿಯರು ಪ್ರಾರ್ಥಿಸಿದರು. ಶಾಖಾ ವ್ಯವಸ್ಥಾಪಕರಾದ ಶ್ರೀ ರಾಜೇಶ್ ಬಿ.ಎಸ್. ವಂದಿಸಿ, ಹಿರಿಯ ಅಧಿಕಾರಿ ಶ್ರೀ ಶಿವಪ್ರಸಾದ್ ಟಿ. ನಿರೂಪಿಸಿದರು.



ಶ್ರೀ ಕೃಷ್ಣಾ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಸಂಕೇಶ್ವರ ಸಹಕಾರಿಯ ನೂತನ ಕಟ್ಟಡದ ಉದ್ಘಾಟನೆಯನ್ನು ಶ್ರೀ ಮ.ನಿ.ಪ್ರ.ಜ.ಪಂಚಮ ಶ್ರೀ ಶಿವಲಿಂಗೇಶ್ವರ ಮಹಾಸ್ವಾಮಿಗಳ ದಿವ್ಯಸಾನಿಧ್ಯದಲ್ಲಿ ಶ್ರೀ ಉಮೇಶ ಕತ್ತಿ, ಮಾಜಿ ಸಚಿವರು ಹಾಗೂ ಶಾಸಕರು, ಹುಕ್ಕೇರಿ ಇವರು ಉದ್ಘಾಟಿಸಿದರು.ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ಮುಖ್ಯ ಅತಿಥಿಗಳಾಗಿ ಶ್ರೀ ಅಪ್ಪಾಸಾಹೇಬ ಶಿರಕೋಳಿ, ಶ್ರೀ ರಾಜೇಂದ್ರ ಪಾಟೀಲ, ಶ್ರೀ ಶ್ರೀಕಾಂತ ಹತನೂರಿ ಹಾಗೂ ಗಣ್ಯರು ಉಪಸ್ಥಿತರಿದ್ದರು.

ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್ ಲಿ., ಕಾರವಾರ ಸಹಕಾರಿಯ 11ನೇ ಶಾಖೆಯಾದ ಮುಂಡಗೋಡ ಶಾಖೆಯ ನೂತನ ಕಟ್ಟಡ ಸ್ಥಳಾಂತರ ಸಮಾರಂಭದ ಉದ್ಘಾಟನೆಯು ಯಲ್ಲಾಪುರ-ಮುಂಡಗೋಡ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಶಿವರಾಮ ಹೆಬ್ಬಾರ್‌ರವರ ಅಮೃತ ಹಸ್ತದಿಂದ ನೆರವೇರಿತು.



# ಶಿವಮೊಗ್ಗ ಜಿಲ್ಲಾ ಸಮ್ಮೇಳನ – ಸೌಹಾರ್ದ ಸಹಕಾರಿಗಳ ಒಕ್ಕೂಟದ ಉದ್ಘಾಟನೆ

**ತೀರ್ಥಹಳ್ಳಿ :** 29 ನವೆಂಬರ್ 2015ರಂದು ಶಿವಮೊಗ್ಗ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉದ್ಘಾಟನಾ ಸಮಾರಂಭಕ್ಕೆ ಶಿಕ್ಷಣ ಸಚಿವರಾದ ಶ್ರೀ ಕಿಮ್ಮನೆ ರತ್ನಾಕರ್‌ರವರು ದೀಪ ಬೆಳಗಿಸುವುದರೊಂದಿಗೆ ಚಾಲನೆ ನೀಡಿದರು.

ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಒಕ್ಕೂಟವನ್ನು ಶ್ರೀ ಆರಗ ಜ್ಞಾನೇಂದ್ರರವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಗುರುನಾಥ ಜಾಂತಿಕರರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಸಹಕಾರಿಗಳ ಉಪ ನಿಬಂಧಕರಾದ ಶ್ರೀ ಎ.ಎಸ್. ಜಯಪ್ಪ ಇವರು ಹಾಜರಿದ್ದು, ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಈ ಸಂದರ್ಭದಲ್ಲಿ ಹಿರಿಯ ಸಹಕಾರಿ, ಮ್ಯಾಮ್ಕೋಸ್ ಮಾಜಿ ಉಪಾಧ್ಯಕ್ಷರೂ ಆದ ಶ್ರೀ ನರಸಿಂಹ ನಾಯಕ್, ಕುರುವಳ್ಳಿ ಇವರಿಗೆ ಸನ್ಮಾನಿಸಲಾಯಿತು. ಶ್ರೀ ಪ್ರಸನ್ನ ಕುಮಾರ್ ಎ.ಆರ್. ರವರು ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದು, ವೇದಿಕೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ರವಿಕುಮಾರ್ ಹೆಚ್.ವಿ., ಇವರು ಉಪಸ್ಥಿತರಿದ್ದರು.

ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಯ ಅಧ್ಯಕ್ಷರು ಮತ್ತು ನಿರ್ದೇಶಕರುಗಳಿಗೆ ನಡೆದ ಕಾರ್ಯಾಗಾರವನ್ನು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಮಹದೇವಪ್ಪ ಬಿ.ಎ, ನಿವೃತ್ತ ಅಪರ ನಿಬಂಧಕರು, ಬೆಂಗಳೂರು ಹಾಗೂ ಶ್ರೀ ಮನೋಹರ ಮಸ್ಕಿ, ಅಧ್ಯಕ್ಷರು, ಸುಕೋ ಬ್ಯಾಂಕ್ ಇವರುಗಳು ನಡೆಸಿಕೊಟ್ಟರು. ಜಿಲ್ಲಾ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ಕಾರ್ಯಾಗಾರವನ್ನು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಶರಣಗೌಡ ಜಿ. ಪಾಟೀಲ, ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಶ್ರೀ ಶ್ರೀಕಾಂತ ಬರುವೆ, ಸಹಪ್ರಧಾನ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಮತ್ತು ಶ್ರೀ ಬಿ.ವಿ. ರವೀಂದ್ರನಾಥ, ಸನ್ನದು ಲೆಕ್ಕ ಪರಿಶೋಧಕರು, ಸಾಗರ ಇವರುಗಳು ನಡೆಸಿಕೊಟ್ಟರು.

ಸಮಾರೋಪ ಸಮಾರಂಭವು ಶ್ರೀ ಆರಗ ಜ್ಞಾನೇಂದ್ರ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯಾಗಾರದಲ್ಲಿ ವಿಷಯಗಳ ಬಗ್ಗೆ ಮಾತನಾಡಿ, ಪ್ರತಿಯೊಬ್ಬ ಸಹಕಾರಿಯು ಸಂಸ್ಥೆಯ ಏಳಿಗೆಗೆ ಕಂಕಣಬದ್ಧರಾಗಿ ಶ್ರಮಿಸಬೇಕೆಂದು ತಿಳಿಸಿದರಲ್ಲದೇ, ಡಿ.ಸಿ.ಸಿ ಬ್ಯಾಂಕ್‌ನಲ್ಲಿ ಶೇರು ಪಡೆಯಲು ಪ್ರಯತ್ನಿಸುವುದಾಗಿ ತಿಳಿಸಿದರು. ಪ್ರಾರ್ಥನೆ ಕು:ಸಂಗೀತ ಹೆಗಡೆ, ಸ್ವಾಗತ ಶ್ರಿ ಎಸ್ ಎ ನಾರಾಯಣ ಮೂರ್ತಿ ನೆರವೇರಿಸಿದರು. ಕಾರ್ಯಕ್ರಮ ನಿರೂಪಣೆಯನ್ನು ಶ್ರೀ ಗೌತಮ್ ಇವರು ನೆರವೇರಿಸಿ, ವಂದನಾರ್ಪಣೆ ಶ್ರೀ ಸಂದೇಶ ಜವಳಿಯಿಂದ ನಡೆಯಿತು.

## ಮೊಳಕಾಲ್ಮೂರಿನಲ್ಲಿ 62ನೇ ಅಖಿಲ ಭಾರತ ಸಹಕಾರ ಸಪ್ತಾಹ




ಮೊಳಕಾಲ್ಮೂರು ಸೌಹಾರ್ದ ಪತ್ತಿನ ಸಹಕಾರಿ ನಿ., ಮೊಳಕಾಲ್ಮೂರು ಸಹಕಾರಿಯಲ್ಲಿ 62ನೇ ಅಖಿಲ ಭಾರತ ಸಹಕಾರ ಸಪ್ತಾಹ ರಾಜ್ಯ ಮಟ್ಟದ ದಿನಾಚರಣೆಯನ್ನು ದಿನಾಂಕ : 16.11.2015 ರಂದು ಚಿತ್ರದುರ್ಗದ ಶ್ರೀ ಮುರುಘಾಮಠದ ಬಸವೇಶ್ವರ ಸಭಾ ಭವನದಲ್ಲಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮೊಳಕಾಲ್ಮೂರು ಸೌಹಾರ್ದ ಪತ್ತಿನ ಸಹಕಾರಿಯನ್ನು ಉತ್ತಮ ಸಹಕಾರಿ ಎಂದು ಪರಿಗಣಿಸಿ, ಸಹಕಾರಿಯ ಅಧ್ಯಕ್ಷರಾದ ಶ್ರೀ ಎಮ್.ಸಿ.ದೇವದಾಸ್, ಕಾರ್ಯದರ್ಶಿಯಾದ ಶ್ರೀ ಸೈಯದ್ ಮುಹೀಬುಲ್ಲಾರವರಿಗೆ ಪ್ರಶಸ್ತಿ ನೀಡಿ, ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಗಳ ಸಹಾಯಕ ನಿಬಂಧಕರಾದ ಶ್ರೀ ಎಸ್.ಎಮ್ ಸಿದ್ದೀಕ್ ಸಹಕಾರಿಯ ನಿರ್ದೇಶಕರಾದ ಶ್ರೀ ವೇಣು ಗೋಪಾಲ್, ಶ್ರೀ ಸಾಕ್ರೆ ರಾಮಕೃಷ್ಣ, ಶ್ರೀ ಟಿ.ರವಿಕುಮಾರ್, ಶ್ರೀ ಹೆಚ್.ವಿ.ಜಯಣ್ಣ ಮತ್ತು ಇತರರು ಉಪಸ್ಥಿತರಿದ್ದರು.

## The IFFCO Sahakarita Ratna Award Honored to Sri Satish Marathe



IFFCO Sahakarita Ratna Award Honored to Sri Satish Marathe

`Sahakarita Ratna', the most prestigious award in India's Co-operative sector was recently presented to Satish Marathe, President of Sahakar Bharati for his outstanding academic leadership and contribution towards the cooperative sector in recent years.

The IFFCO `Sahakarita Ratna' and the `Sahakarita Bandhu' Awards are conferred on individual eminent cooperators who have rendered selfless service in the furtherance and development of the cooperative movement.

Sri Satish Marathe Born on February 1, 1950, holds Bachelor's Degree in Commerce and Law (Gen) from the University of Bombay. He holds Diploma in Journalism from the Bharatiya Vidya Bhavan, Mumbai and was the recipient of Gold Medal in the area of Reporting.

Sri Satish Marathe is the National President of Sahakar Bharati of which he is a Founder Member. Started in 1978, Sahakar Bharati has spread its activities India wide and presently, over 20,000 Co Operatives are associated with Sahakar Bharati. It is the largest NGO in the Co Operative sector in the country.

Sri Satish Marathe was associated with so many Banking Institutions in Co-operative field. Presently, he is Director on the Board of Rajkot Nagarik Sahakari Bank Ltd (Scheduled Bank), National Youth Co Operative Society Ltd and has been recently, inducted as Expert Director on the Board of Thane Bharat Sahakari Bank Ltd (Scheduled Bank).


# MANVI PATTANA SOUHARDA SAHAKARI BANK NI

**HEAD OFFICE- Aparna Chitra Mandira Complex, Sindhanur Road Manvi 584 123 Dist : Raichur**
**Phone:-08538220609, 220878**
Email:-mpssb_n@yahoo.com, Website:-www.mpssbank.com

Ref: MPSSB/HO/2015-16 Date:-18.11.2015

## RECRUITMENT OF JUNIOR ASSISTANTS AND OFFICERS

We are the "New Generation" fully computerized Bank operating under the Sahakara Souharda Act 1997. We provide entire range of Banking Services at our branches located at Raichur, Bellary, Koppal, Hospet, Gangavathi, Siriguppa, Lingasugur, Karatagi and Hagari-Bommanahalli. The Bank invites Application for the post mentioned below to meet its growth plans.

| S No. | Name of the Post | No of posts | Salary during Probationary period | Regular scale of Salary after successful completion of probationary period |
|---|---|---|---|---|
| 01 | Junior Assistant | 05 | Rs.10,000.00 per month | Basic salary: 13,500.00 +Dearness Allowance and House Rent Allowance as per state Govt rules & Provident Fund, Group Insurance & Gratuity facility is applicable. |
| 02 | Officer | 05 | Rs.12,000.00 per month | Basic salary:15000.00+Dearness Allowance and House Rent Allowance as per state Govt rules & Provident Fund, Group Insurance & Gratuity facility is applicable. |

Eligibility (for both the posts):-

- Graduation from a recognized university *Computer knowledge is essential.
- Experience in Banking and Qualification like B.Com/M.Com/MBA will be preferred.
- For the Post of Officer, Applicants working in Financial Institution will be given preference. Candidates having banking experience five years and above will have a probationary period of 6 months to 1 year,

Age:- As on 01 November 2015, not more than 30 years.

Selection Process:- The selection process will comprise of separate Written Examinations for each of the posts and separate personal interviews.

Terms of Appointing and posting:- Initial appointment for above posts will be on Probationary basis for a period of 2 years from the date of joining. Confirmation and offer of regular scale of salary will be depends will upon the performance.

How to apply:- Eligible candidates are required to Submit an application in the format prescribed by the bank with Xerox copy of Educational and Experience certificates and send the same along with Examination fee of Rs. 200/- for each of the above posts by way of a DD on any Bank favoring MANVI PATTANA SOUHARDA SAHAKARI BANK NI. Please note that if you are applying for both the posts you have to send a separate application along with the examination fee DD for Rs. 200/-. each. Applying candidates can download the application through our bank Website. www.mpssbank.com.

Applications may be forwarded to the following address

Chief Executive Officer,
Manvi Pattana Souharda Sahakari Bank Ni,
Head Office: Aparna Chitra Mandira Complex
Sindhanur Road Manvi-584123
Dist. Raichur. Karnataka.

Last date of Application:- 15th Dec 2015

Sd/-
PRESIDENT
Manvi Pattana Souharda
Sahakari Bank Ni Clearing



# ಸಹಕಾರಿ ಶಿಕ್ಷಣದ ಮಹತ್ವ

ಶ್ರೀ ರಾಧಾಕೃಷ್ಣ ಕೋಟೆ

ಸಹಕಾರಿ ರಂಗ ಎಲ್ಲಕ್ಕಿಂತ ಭಿನ್ನವಾದ ಸಾಮಾಜಿಕ ಬದ್ಧತೆಯುಳ್ಳ ವ್ಯಾಪಾರೀ ಕ್ಷೇತ್ರ. ಸಹಕಾರಿ ರಂಗ ಸದಸ್ಯ ಕೇಂದ್ರಿತ ವ್ಯವಸ್ಥೆಯಾಗಿದ್ದು ಹಕ್ಕು, ಕರ್ತವ್ಯ, ಲಾಭದಲ್ಲಿ ಸರ್ವಸದಸ್ಯರು ಸಮಾನರು. ಅಂತರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆ (ICA) ರೂಪಿಸಿದ ಈ ಕೆಳಗಿನ ಸಹಕಾರಿ ನೀತಿಗಳು – 1) ಮುಕ್ತ ಹಾಗೂ ಸ್ವಯಂಪ್ರೇರಿತ ಸದಸ್ಯತ್ವ. 2) ಪ್ರಜಾಸತ್ತಾತ್ಮಕ ಸದಸ್ಯರ ಹತೋಟಿ. 3) ಆರ್ಥಿಕ ಚಟುವಟಿಕೆಗಳಲ್ಲಿ ಸದಸ್ಯರ ಪಾಲು. 4) ಸ್ವಾಯತ್ತೆ, ಸ್ವಾತಂತ್ರ್ಯ. 5) ಸಹಕಾರಿ ಶಿಕ್ಷಣ, ತರಬೇತಿ ಮತ್ತು ಪ್ರಚಾರ. 6) ಸಹಕಾರಿಗಳಲ್ಲಿ ಸದಸ್ಯರ ಸಹಕಾರ. 7) ಸಾಮಾಜಿಕ ಕಳಕಳಿ – ಎಲ್ಲವೂ ಒಂದಕ್ಕೊಂದು ಪ್ರಭಾವಶಾಲಿ ಹಾಗೂ ಮಹತ್ವವನ್ನು ಪಡೆದಿವೆ. ಇದನ್ನು ಗಮನಿಸಿದಾಗ ಸಹಕಾರ ಸಮಾಜವಾದ ಹಾಗೂ ಬಂಡವಾಳವಾದ ನಡುವಿನ ಸುವರ್ಣ ಮಾಧ್ಯಮ ಎಂಬುದಾಗಿ ಪ್ರತಿಬಿಂಬಿತವಾಗಿರುವುದು ಅಕ್ಷರಶಃ ಸತ್ಯ ಎಂದು ಕಂಡುಬರುತ್ತದೆ.

ಸಹಕಾರಿ ರಂಗಕ್ಕೆ ಪ್ರವೇಶಿಸುವ ಪ್ರತಿಯೊಬ್ಬನೂ ಕನಿಷ್ಠ ಶಿಕ್ಷಣ ಹೊಂದುವ ಅವಶ್ಯಕತೆಯಿದೆ. ಏಳು ಸಹಕಾರಿ ನೀತಿಗಳಲ್ಲಿ ಶಿಕ್ಷಣ, ತರಬೇತಿಗೂ ಸ್ಥಾನವಿರುವುದು ಸಹಕಾರಿ ಶಿಕ್ಷಣದ ಮಹತ್ವವನ್ನು ಸಾರುತ್ತದೆ. ಪ್ರತಿಯೊಬ್ಬ ಸದಸ್ಯನಿಗೂ ಸಂಘದ ಆಗುಹೋಗುಗಳ ಬಗ್ಗೆ ಪ್ರಾಥಮಿಕ ಜ್ಞಾನ ತೀರಾ ಅಗತ್ಯ. ಇದು ಸಾಧ್ಯವಾಗಬೇಕಾದರೆ ಆತ ಸಂಘದ ದೈನಂದಿನ ವ್ಯವಹಾರದಲ್ಲಿ ನಿರಂತರ ತೊಡಗಿಸಿಕೊಂಡು ಸಕ್ರಿಯನಾಗಿರಬೇಕು.

ಸಂಘದ ಸಿಬ್ಬಂದಿ ಸಹಕಾರದ ಕುರಿತು ಪೂರ್ತಿ ಶಿಕ್ಷಿತನಾಗಿರಬೇಕು. ಸಹಕಾರಿ ವ್ಯವಸ್ಥೆ, ಕಾಯ್ದೆ, ನಿಯಮಗಳ ಬಗ್ಗೆ ತಿಳುವಳಿಕೆ ಹೊಂದಿದ್ದು, ಲೆಕ್ಕಪತ್ರ ಜೋಡಣೆ, ವ್ಯವಹಾರದ ಕುರಿತು ಸಂಪೂರ್ಣ ಮಾಹಿತಿ ಹೊಂದಿರಬೇಕು. ಆಧುನಿಕ ಮಾಹಿತಿ ತಂತ್ರಜ್ಞಾನದ ಯುಗದಲ್ಲಿ ವೇಗಕ್ಕೆ ಬಹಳಷ್ಟು ಮಹತ್ವವಿದೆ. ಲಭ್ಯವಿರುವ ಎಲ್ಲಾ ತಂತ್ರಜ್ಞಾನದ ಅರಿವು, ಉತ್ತಮ ಸಂವಹನ, ಸಿಬ್ಬಂದಿಗೆ ಇರಬೇಕು. ವ್ಯಕ್ತಿತ್ವವಿಕಸನದ ದೃಷ್ಟಿಯಿಂದ ಸಹಕಾರಿ ತರಬೇತಿ ಕೇಂದ್ರಗಳಲ್ಲಿ ತರಬೇತಿ ಹಾಗೂ ಆಗಾಗ ಬೇರೆ ಬೇರೆ ವಿಧದ ಅಲ್ಪಾವಧಿ ತರಬೇತಿ ಶಿಬಿರಗಳಲ್ಲಿ ಭಾಗವಹಿಸಿ, ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು. ಸಿಬ್ಬಂದಿ ಸದಸ್ಯರೊಡನೆ ಪ್ರೀತಿ, ಗೌರವಗಳಿಂದ ಕೂಡಿದ ಉತ್ತಮ ಸಂಬಂಧವನ್ನು ಹಾಗೂ ನಗುಮೊಗದ ಕಾರ್ಯದೊಂದಿಗೆ ವರ್ತಿಸಬೇಕು. ಈ ಎಲ್ಲದಕ್ಕೂ ಮಾನವ ಸಂಪನ್ಮೂಲ ಅಭಿವೃದ್ಧಿಪಡಿಸುವ ಶಿಬಿರಗಳ ಮೊರೆಹೋಗಬೇಕಾಗುತ್ತದೆ. ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಬೌದ್ಧಿಕ ಗುಣಮಟ್ಟ ಇತರ ಸಿಬ್ಬಂದಿಯನ್ನು ಹತೋಟಿಯಲ್ಲಿಟ್ಟು ಸಂಸ್ಥೆಯ ಪ್ರತಿಯೊಂದು ವ್ಯವಹಾರವನ್ನು ವ್ಯವಸ್ಥಿತವಾಗಿ ಕೊಂಡೊಯ್ಯುವರೇ ಪೂರಕವಾಗಿರಬೇಕು. ಆತನಲ್ಲಿ ಸಹಕಾರಿ ರಂಗದ ಪರಿಪೂರ್ಣ ಅರಿವು, ಸಂಸ್ಥೆಯ ವ್ಯವಹಾರಗಳಿಗೆ ಲಗಾವಾಗತಕ್ಕ ನಿಯಮಗಳ ತಿಳುವಳಿಕೆ ಇರಲೇಬೇಕು. ಕಾಲಕಾಲಕ್ಕೆ ಆತ ಸಂಸ್ಥೆಗೆ ಲಗಾವಾಗತಕ್ಕ ಕಾಯ್ದೆ, ಪೂರಕ ಕಾಯ್ದೆ, ನಿಯಮ ಸುತ್ತೋಲೆಗಳನ್ನು ತಿಳಿದುಕೊಂಡು ಆಡಳಿತ ಮಂಡಳಿಗೆ ಮಾಹಿತಿ ಹಾಗೂ ಸಿಬ್ಬಂದಿಗೆ ಮಾರ್ಗದರ್ಶನವನ್ನು ನೀಡುವವನಾಗಿರಬೇಕು.

ಆಡಳಿತ ಮಂಡಳಿ ಸದಸ್ಯರ ಸಹಕಾರಿ ಜ್ಞಾನ ಸಂಘದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಆಡಳಿತ ಮಂಡಳಿ ಸಭೆಗಳಲ್ಲಿ ಸಂಸ್ಥೆಯ ಲೆಕ್ಕಪತ್ರಗಳು, ಇಲಾಖಾ ಸುತ್ತೋಲೆ, ಸಂಸ್ಥೆ ತೆಗೆದುಕೊಳ್ಳುವ ನಿರ್ಧಾರಗಳ ಬಗ್ಗೆ ರಚನಾತ್ಮಕವಾದ ಆರೋಗ್ಯಕರ ಚರ್ಚೆ, ವಿಮರ್ಶೆ ನಡೆಯಲೇಬೇಕು. ಇದು ಸಾಧ್ಯವಾಗಬೇಕಾದರೆ ಸಹಕಾರಿ ಕಾಯ್ದೆ, ನಿಯಮ, ಲೆಕ್ಕಪತ್ರಗಳ ಮೂಲಭೂತ ಜ್ಞಾನ, ಪ್ರಜಾಸತ್ತಾತ್ಮಕ ಆಡಳಿತದ ಸಾಮಾನ್ಯ ಕಲ್ಪನೆ ಆಡಳಿತ ಮಂಡಳಿ ಸದಸ್ಯನಿಗಿರಬೇಕು. ವರದಿಗಳ ವಿಶ್ಲೇಷಣೆ, ಸುತ್ತೋಲೆಗಳ ಮಾಹಿತಿ, ತೆರಿಗೆ ನೀತಿಗಳ ಬಗ್ಗೆ ಅರಿವು, ಪೂರಕ ಕಾಯ್ದೆಗಳ ಬಗ್ಗೆ ತಿಳುವಳಿಕೆ ಆತನಲ್ಲಿ ಇರಬೇಕು – ಇದೆಲ್ಲವೂ ಕರಗತವಾಗಬೇಕಾದಲ್ಲಿ ಮುಖ್ಯವಾಗಿ ಆತ ತೊಡಗಿಸಿಕೊಳ್ಳುವ ಗುಣವನ್ನು ಹೊಂದಿರಬೇಕು. ಅಭ್ಯಾಸವರ್ಗಗಳು, ಶಿಬಿರಗಳ ಮೂಲಕ ಆಡಳಿತ ಮಂಡಳಿ ಸದಸ್ಯರು ಇದನ್ನು ಪಡೆದುಕೊಳ್ಳಲು ಸಾಧ್ಯವಿದೆ. ಸಂಬಂಧಿಸಿದ ವಿಚಾರಗಳನ್ನು ಓದುವ, ಅಭ್ಯಸಿಸುವ ಸ್ವಭಾವವಿರಬೇಕು. ಸಹಕಾರಿ ಪತ್ರಿಕೆಗಳು ನಿಯತಕಾಲಿಕಗಳು ಮಾಹಿತಿಗಳನ್ನು ಒದಗಿಸುತ್ತವೆ. ಹೆಚ್ಚಿನ ಆಡಳಿತ ಮಂಡಳಿ ಸದಸ್ಯರ ಉತ್ಸಾಹ ಚುನಾವಣೆಗೆ ಸೀಮಿತವಾಗಿರುತ್ತದೆ. ಸಹಕಾರಿ ಕಾಯ್ದೆಯಲ್ಲಿ ನಿರ್ದೇಶಕನಾದ ತಕ್ಷಣದಲ್ಲಿ ಆತ ಕಡ್ಡಾಯ ಶಿಕ್ಷಣ ಹೊಂದುವ ನಿಯಮ ಜಾರಿಗೆ ತರಬೇಕು. ಒಂದು ವೇಳೆ ಆತ ಕನಿಷ್ಠ ಸಹಕಾರಿ ಶಿಕ್ಷಣದಲ್ಲಿ ಅನುತ್ತೀರ್ಣನಾದಲ್ಲಿ ನಿರ್ದೇಶಕ ಸ್ಥಾನಕ್ಕೆ ಅನರ್ಹಗೊಳ್ಳತಕ್ಕದ್ದು. ಇದು ಸಹಕಾರಿ ರಂಗದಲ್ಲಿ ವೃತ್ತಿಪರತೆಯನ್ನು ಬಲಪಡಿಸುವ ದಿಕ್ಕಿನಲ್ಲಿ ಬಲವಾದ ಹೆಜ್ಜೆಯಾಗಬಹುದು.

ಅಧ್ಯಕ್ಷರು ಸಂಸ್ಥೆಯ ಕೇಂದ್ರಬಿಂದುವಾಗಿ ಎಲ್ಲರಿಗಿಂತಲೂ ಹೆಚ್ಚಿನ ಸಹಕಾರಿ ಜ್ಞಾನ ಹೊಂದಿರತಕ್ಕದ್ದು. ಮಾನವೀಯ




# ಸಹಕಾರಿ ಕ್ಷೇತ್ರದಲ್ಲಿ ಪರಿಣಾಮಕಾರಿ ನಾಯಕತ್ವ : ಭಾಗ-2 ನಾಯಕತ್ವ

ಶ್ರೀ ಬಿ.ಎ.ಮಹದೇವಪ್ಪ, ಸನ್ಮತಿ ಪ್ರತಿಷ್ಠಾನ, ಶಿವಮೊಗ್ಗ.

"ಒಬ್ಬ ವ್ಯಕ್ತಿ ಮನಸ್ಸು ಮಾಡಿದರೆ... ಏನನ್ನು ಬೇಕಾದರೂ ಸಾಧಿಸಬಹುದು" ಎಂಬುದಕ್ಕೆ ಮೊಹಮ್ಮದ್ ಯೂನಸ್‌ರವರು ಜೀವಂತ ಉದಾಹರಣೆ. 1971ರಲ್ಲಿ ಬಾಂಗ್ಲಾ ದೇಶದ ಸ್ಥಾಪನೆಯಾದ ನಂತರದಲ್ಲಿ... ಆ ದೇಶದ ಗ್ರಾಮೀಣ ಜನರ ಕಷ್ಟ ಕಾರ್ಪಣ್ಯಗಳನ್ನು ಕಣ್ಣಾರೆ ನೋಡಿದರು. ಹಳ್ಳಿಯ ಬಡವರು... ಶ್ರೀಮಂತರಿಂದ ಸಾಲ ಪಡೆದು, ಹೆಚ್ಚಿನ ಬಡ್ಡಿ ತೆತ್ತು ಪಡಬಾರದ ಯಾತನೆ ಪಡುತ್ತಿದ್ದುದನ್ನು ಗಮನಿಸಿದರು.

ಅಂದುಕೊಂಡಿದ್ದನ್ನೆಲ್ಲಾ ಮನುಷ್ಯ ಸಾಧಿಸುತ್ತಿದ್ದಾನೆ ಎಂದ ಮೇಲೆ... ಬಡತನದ ನಿವಾರಣೆ ಏಕೆ ಸಾಧ್ಯವಿಲ್ಲ? ಎಂಬ ಪ್ರಶ್ನೆಯೊಂದಿಗೆ "ಅನ್ನ ಕೊಡದ ಅರ್ಥಶಾಸ್ತ್ರ... ಅದು ಅನರ್ಥಶಾಸ್ತ್ರ" ಎಂದು, ತಮ್ಮ ಅರ್ಥಶಾಸ್ತ್ರಜ್ಞರ ಹುದ್ದೆಯನ್ನು ಬಿಟ್ಟು ವಿದೇಶದಿಂದ ತಮ್ಮ ಊರಿಗೆ ಬಂದರು. ಬಾಂಗ್ಲಾ ದೇಶದ ಗ್ರಾಮೀಣ ಜನರ ಜೀವನ ಮಟ್ಟವನ್ನು ಉತ್ತಮಗೊಳಿಸಲು ಪ್ರಥಮ ಹಂತದಲ್ಲಿ ಸ್ವಸಹಾಯ ಗುಂಪುಗಳನ್ನು ರಚಿಸುವುದರ ಮೂಲಕ... ಆರ್ಥಿಕ-ಸಾಮಾಜಿಕ ಮೌನ ಕ್ರಾಂತಿಗೆ ನಾಂದಿ ಹಾಡಿದರು. ಯಾವುದೇ ಜಾಮೀನು ಇಲ್ಲದೇ ಹಳ್ಳಿಯ ಹೆಂಗಸರಿಗೆ ಸಾಲ ನೀಡುವ ಕ್ರಮ ಕೈಗೊಂಡರು.



ಮೊಹಮ್ಮದ್ ಯೂನಸ್

ಬಡವರಲ್ಲಿಯೂ ಆತ್ಮವಿಶ್ವಾಸವಿದೆ; ಅವರೂ ನಂಬಿಕೆ ವಿಶ್ವಾಸಗಳಿಗೆ ಅರ್ಹರು ಎಂಬುದನ್ನು ಎಲ್ಲರಿಗೂ ತಿಳಿಸಿಕೊಟ್ಟರು. ಇದರ ಫಲವೇ ಗ್ರಾಮೀಣ ಬ್ಯಾಂಕ್ ಸ್ಥಾಪನೆಗೆ ನಾಂದಿಯಾಯಿತು. ಇದರಿಂದಾಗಿ ಬಾಂಗ್ಲಾದೇಶದ ಹಳ್ಳಿ ಹಳ್ಳಿಗಳಲ್ಲಿ ಸಾಮಾಜಿಕ-ಆರ್ಥಿಕ ಪರಿವರ್ತನೆ ಪ್ರಾರಂಭವಾಯಿತು. ಯುವ ಜನತೆ... ಉದ್ಯೋಗವನ್ನು ಅರಸಿಕೊಂಡು ಹೋಗುವುದರ ಬದಲಿಗೆ... ತಾವೇ ಉದ್ಯೋಗವನ್ನು ಸೃಷ್ಟಿಸಿಕೊಳ್ಳುವಂತೆ ಸ್ವ-ಉದ್ಯೋಗ ಪ್ರವೃತ್ತಿಯನ್ನು ಹುಟ್ಟು ಹಾಕಿದರು.

ತರಕಾರಿಗಳನ್ನು ಬೆಳೆಸುವುದು ಹೇಗೆ? ಅವುಗಳನ್ನು ಹೇಗೆ ಸಂಸ್ಕರಿಸಬೇಕು? ವಿತರಣೆ ಹೇಗಿರಬೇಕು? ಹಾಲು ಸಂಗ್ರಹಣೆ ಮತ್ತು ಮಾರಾಟದ ವಿಧಾನಗಳು ಹೇಗಿರಬೇಕು? ಎಂಬುದರ ನಿರ್ವಹಣೆಯ ಬಗ್ಗೆ ತರಬೇತಿ ವ್ಯವಸ್ಥೆ ಮಾಡಿದರು.

ಪ್ರಾಥಮಿಕ ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳು ಪ್ರತಿಯೊಬ್ಬರಿಗೂ ಸುಲಭವಾಗಿ ದೊರಕುವಂತೆ ನೋಡಿಕೊಂಡರು. ಬದಲಾವಣೆಯ ಹರಿಕಾರರಾಗಿ ಮೂಡಿಬಂದರು. ಗ್ರಾಮೀಣ ಬಾಂಗ್ಲಾದ ಪಿತಾಮಹ ಎನಿಸಿಕೊಂಡರು. 2006ರಲ್ಲಿ ನೊಬೆಲ್ ಬಹುಮಾನ ಪುರಸ್ಕೃತರಾದರು. ಇವರು ನಿಜವಾದ ನಾಯಕರು.

ನಾಯಕರಾದವರು... ಮೊಳಕೆಯಲ್ಲಿಯೇ ಕನಸುಗಳನ್ನು ಬಿತ್ತುತ್ತಾರೆ... ಅಷ್ಟೇ ಅಲ್ಲ... ಆ ಕನಸುಗಳನ್ನು ವಾಸ್ತವಕ್ಕಿಳಿಸಿ ಯಶಸ್ಸಿನ ಫಲ ಪಡೆಯುತ್ತಾರೆ. ಈ ಯಶಸ್ಸು ಪೀಳಿಗೆಯಿಂದ-ಪೀಳಿಗೆಗೆ ಉತ್ತಮ ಫಲಿತಾಂಶ ನೀಡುತ್ತಲೇ ಇರುತ್ತದೆ. ಏಕೆಂದರೆ ನಾಯಕರಾದವರು ಯಾವಾಗಲೂ ವಾಸ್ತವಿಕ ತಳಹದಿಯ ಮೇಲೆ ಕೆಲಸ ಮಾಡುತ್ತಾರೆ. ಮುಂದಿನ ಐದು ವರ್ಷಗಳ ಕೊನೆಯಲ್ಲಿ ಏನಾಗಿರಬೇಕು? ಎಂಬುದನ್ನು ಮನಗಂಡು... ಅದಕ್ಕಾಗಿ ಈ ಕ್ಷಣದಿಂದ ಏನು ಮಾಡಬೇಕು? ಎಂಬ ಚಿಂತನೆಯಿಂದ ಕೆಲಸ ಮಾಡುತ್ತಾರೆ. ಇಂತಹ ಧೀಮಂತ ವ್ಯಕ್ತಿಗಳೇ ನಮ್ಮ ನಾಯಕರು.

## ಸಹಕಾರಿ ಶಿಕ್ಷಣದ ಮಹತ್ವ

... 16ನೇ ಪುಟದಿಂದ

ಸಂಬಂಧಗಳು, ನಾಯಕತ್ವಗುಣ, ಮಾತಿನಕಲೆ, ಸದಸ್ಯರಿಗೆ ಉತ್ತರಿಸುವ ಶೈಲಿ, ಆಡಳಿತ ವೈಖರಿ – ಎಲ್ಲದರಲ್ಲೂ ಆತನ ಗುಣಮಟ್ಟ ಉತ್ಕೃಷ್ಟವಾಗಿರತಕ್ಕದ್ದು. ಯೋಜನೆ-ನಾಯಕತ್ವ-ಗುರಿ ಸಾಧನೆಗೆ ಪ್ರಮುಖವಾಗಿ ಸಹಕಾರಿ ಕಾರ್ಯಕರ್ತರಿಗೆ ಶಿಕ್ಷಣ, ಸಿಬ್ಬಂದಿಗೆ ಶಿಕ್ಷಣ ಅಗತ್ಯ. ಸಹಕಾರಿ ಕಾರ್ಯಕರ್ತ ಸಂಘದ ಬೈಲಾ, ಸಹಕಾರಿ ಕಾಯ್ದೆ, ನಿಯಮಗಳ ಬಗ್ಗೆ ಸಾಮಾನ್ಯ ತಿಳುವಳಿಕೆ ಹೊಂದಿರಬೇಕು. ಸಂಘದ ಚಟುವಟಿಕೆಗಳ ಅಧ್ಯಯನ, ನಿರಂತರ ತೊಡಗಿಸಿಕೊಳ್ಳುವುದು, ಆಗಾಗ ಜರುಗುವ ಅಭ್ಯಾಸವರ್ಗ, ಮಾಹಿತಿ ಶಿಬಿರಗಳ ಮೂಲಕ ಸಹಕಾರಿ ಕಾರ್ಯಕರ್ತನಿಗೆ ಸಹಕಾರಿ ಶಿಕ್ಷಣ ಲಭ್ಯ. ಸಹಕಾರ ಕ್ಷೇತ್ರ ಎಲ್ಲಕ್ಕಿಂತ ಭಿನ್ನ ಎಂಬ ಜ್ಞಾನ ಸಹಕಾರಿ ಕಾರ್ಯಕರ್ತನಿಗೆ ಇರಬೇಕು. ತನ್ನ ಉತ್ಸಾಹ ಕೇವಲ ಚುನಾವಣೆ, ಸ್ಥಾನಮಾನಕ್ಕೆ ಸೀಮಿತವಾಗಬಾರದು.

ಸಹಕಾರಿ ರಂಗ ಯಶಸ್ಸಿನ ಹಾದಿಯಲ್ಲಿ ಮುನ್ನಡೆಯಬೇಕಾದರೆ ಶಿಕ್ಷಣದ ಪಾಲು ಬಹಳ ದೊಡ್ಡದಿದೆ. ಅಂತಹ ಕನಿಷ್ಠ ಸಹಕಾರಿ ಶಿಕ್ಷಣವನ್ನು ಸಹಕಾರಿ ರಂಗದ ಸದಸ್ಯರು ವಿವಿಧ ರೀತಿಯಲ್ಲಿ ಹೊಂದಿರಬೇಕು. ॥ ಜೈ ಸಹಕಾರ ॥ ■

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲು ನಿರ್ಧರಿಸಲಾಗಿದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ – ಸಂಪಾದಕರು

## ನಿಮ್ಮ ಪ್ರಶ್ನೆ




## ನಮ್ಮ ಉತ್ತರ

– ಶ್ರೀಕಾಂತ ಬರುವೆ

**ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ**

**1. ಸೌಹಾರ್ದ ಸಹಕಾರಿಯ ಉಪನಿಯಮಗಳಲ್ಲಿ ಇರುವ ರೀತಿಯಲ್ಲಿ ಅನರ್ಹತೆಗೆ ಒಳಗಾದಾಗ ಅವನು ಅನರ್ಹನೆಂದು ಘೋಷಿಸುವರು ಯಾರು? ಅಥವಾ ಅನರ್ಹತೆಗೆ ತೆಗೆದುಕೊಳ್ಳಬೇಕಾದ ಕ್ರಮವೇನು?**

**ಉತ್ತರ** : ಸಹಕಾರಿಯ ನಿರ್ದೇಶಕನು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004 ಹಾಗೂ ಸಹಕಾರಿಯ ಉಪ ವಿಧಿಯ ರೀತ್ಯ ಅನರ್ಹತೆಗೆ ಒಳಗಾದರೆ ಅಂತಹ ಸದಸ್ಯನ ಕುರಿತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 20 (3) ರನ್ವಯ ಸಹಕಾರಿಯ ಆಡಳಿತ ಮಂಡಲಿಯು ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ನಂತರ ಅನರ್ಹಗೊಳಿಸಬಹುದಾಗಿರುತ್ತದೆ. ಅಂತಹ ಅನರ್ಹತೆಯ ಕುರಿತು ಮಂಡಲಿಯ ತೀರ್ಮಾನವು ಅಂತಿಮವಾಗಿರುತ್ತದೆ.

**2. ನೌಕರರು ಸದಸ್ಯರಾಗಬಹುದೇ, ಆದಲ್ಲಿ ಅವರು ಸಾಮಾನ್ಯ ಸರ್ವಸದಸ್ಯರ ಸಭೆಯಲ್ಲಿ ಭಾಗವಹಿಸಬಹುದೇ?**

**ಉತ್ತರ** : ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 20ರಲ್ಲಿ ಸಹಕಾರಿಯ ಸದಸ್ಯರು ಯಾರಾಗಬಹುದು ಎಂಬುದನ್ನು ಸ್ಪಷ್ಟವಾಗಿ ಹೇಳಲಾಗಿರುತ್ತದೆ. ಸದರಿ ಕಲಂನಲ್ಲಿ ಸಹಕಾರಿಯ ಸಿಬ್ಬಂದಿಯು ಸಹಕಾರಿಯ ಸದಸ್ಯನಾಗಲು ಯಾವುದೇ ನಿಷೇಧ/ ನಿರ್ಬಂಧ ಇರುವುದಿಲ್ಲ. ಆದರೆ, ಒಂದುವೇಳೆ ಸಹಕಾರಿಯ ಉಪವಿಧಿ ಅಥವಾ ಸಹಕಾರಿಯು ರೂಪಿಸಿಕೊಂಡಿರುವ ಸಿಬ್ಬಂದಿಗಳ ಸೇವಾ ನಿಯಮದಲ್ಲಿ ಸಹಕಾರಿಯ ಸಿಬ್ಬಂದಿಯು ಸಹಕಾರಿಯ ಸದಸ್ಯನಾಗಲು ನಿಷೇಧ/ ನಿರ್ಬಂಧವಿದ್ದಲ್ಲಿ, ಅಂತಹ ಸಹಕಾರಿಯ ಸಿಬ್ಬಂದಿಯು ಸದಸ್ಯನಾಗುವಂತಿಲ್ಲ. ಈ ಮೇಲೆ ತಿಳಿಸಿದಂತೆ ಸಹಕಾರಿಯ ಸಿಬ್ಬಂದಿಯು ಸಹಕಾರಿಯ ಸದಸ್ಯನಾಗಲು ಸಹಕಾರಿಯ ಉಪವಿಧಿ ಅಥವಾ ಸಹಕಾರಿಯು ರೂಪಿಸಿಕೊಂಡಿರುವ ಸಿಬ್ಬಂದಿಗಳ ಸೇವಾ ನಿಯಮದಲ್ಲಿ ನಿಷೇಧ/ ನಿರ್ಬಂಧವಿಲ್ಲದಿದ್ದಲ್ಲಿ ಸದಸ್ಯನಾಗುವ ಸಹಕಾರಿಯ ಸಿಬ್ಬಂದಿಗೆ ಸಹಕಾರಿಯ ಇತರೇ ಸದಸ್ಯರುಗಳಿಗೆ ಪ್ರಾಪ್ತವಾಗುವ ಎಲ್ಲಾ ಹಕ್ಕುಗಳು, ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು ಪ್ರಾಪ್ತವಾಗುತ್ತದೆ.

**3. ಸದಸ್ಯರಿಂದ ಠೇವಣಿ ಸ್ವೀಕರಿಸುವಾಗ ಪಾನ್ ಕಾರ್ಡ್ ಕಡ್ಡಾಯವೇ? ಟಿಡಿಎಸ್ ಕಡಿತಗೊಳಿಸುವುದು ಕಡ್ಡಾಯವೇ? ಇದಕ್ಕೆ ವರಮಾನ ತೆರಿಗೆ ನಿಯಮ ಯಾವುದು?**

**ಉತ್ತರ** : ಸದಸ್ಯರಿಂದ ಠೇವಣಿ ಸ್ವೀಕರಿಸುವಾಗ ಪಾನ್ ಕಾರ್ಡ್ ಪಡೆಯುವುದು ಕಡ್ಡಾಯವಲ್ಲ. ಆದಾಯ ತೆರಿಗೆ ಅಧಿನಿಯಮ, 1961ರ ಕಲಂ 194 ಎ(3) (v)ರನ್ವಯ ಸಹಕಾರಿಯ ಸದಸ್ಯರು ಇಟ್ಟಿರುವ ಠೇವಣಿಗೆ ಟಿಡಿಎಸ್ ಕಡಿತಗೊಳಿಸುವ ಅವಶ್ಯಕತೆ ಯಿರುವುದಿಲ್ಲ. (the provisions of section 194A(3)(v) of the Act provide a general exemption from making tax deduction from payment of interest by all co-operatives to its members).

**ದಿವ್ಯ ಜ್ಯೋತಿ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಕಾರವಾರ.**

**4. ಆರ್.ಬಿ.ಐ.ನವರು ಜಾರಿಗೆ ತಂದಿರುವ ಎರಡನೇ ಶನಿವಾರ ಮತ್ತು ನಾಲ್ಕನೇ ಶನಿವಾರ ಬ್ಯಾಂಕ್‌ಗಳಿಗೆ ರಜೆ. ಈ ನೀತಿ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಗೆ ಅನ್ವಯವಾಗುತ್ತದೆಯೇ? ಏಕೆಂದರೆ ನಾವು ನಮ್ಮ ವ್ಯವಹಾರವನ್ನು ಕೇ.ಡಿ.ಸಿ. ಬ್ಯಾಂಕ್‌ಗಳ ಮೂಲಕ ನಡೆಸುವುದರಿಂದ ಆ ಬ್ಯಾಂಕ್‌ಗಳಿಗೆ ರಜೆ ಇರುವುದರಿಂದ ನಮ್ಮ ವ್ಯವಹಾರವನ್ನು ಯಾವ ರೀತಿ ನಡೆಸಬೇಕು ಮತ್ತು ಈ ರಜೆ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್‌ಗಳಿಗೆ ಅನ್ವಯವಾಗುತ್ತದೆಯೇ?**

**ಉತ್ತರ** : ಭಾರತೀಯ ರಿಸರ್ವ್ ಬ್ಯಾಂಕ್ ಎರಡನೇ ಶನಿವಾರ ಮತ್ತು ನಾಲ್ಕನೇ ಶನಿವಾರ ಬ್ಯಾಂಕ್‌ಗಳಿಗೆ ರಜೆ ಇರುವ ಕುರಿತು ನೀಡಿರುವ ಸುತ್ತೋಲೆಯು ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವುದಿಲ್ಲ (ಸೌಹಾರ್ದ ಸಹಕಾರಿ ಬ್ಯಾಂಕ್ ಹೊರತುಪಡಿಸಿ). ಆದಾಗ್ಯೂ, ಸಹಕಾರಿಗೆ ಬೇರೆ ಬ್ಯಾಂಕುಗಳು ರಜೆ ಇರುವುದರಿಂದ ಆಗುವ ವ್ಯವಹಾರಿಕ ಅನಾನೂಕೂಲತೆಯ ಕುರಿತು ಆಡಳಿತ ಮಂಡಲಿ ಸಭೆಯಲ್ಲಿ ಚರ್ಚಿಸಿ, ಸೂಕ್ತವಾಗಿ ನಿರ್ಣಯಿಸಬಹುದಾಗಿರುತ್ತದೆ.

**ಶ್ರೀ ಚನ್ನಬಸವಸ್ವಾಮಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಗಂಗಾವತಿ.**

**5. ಬ್ಯಾಂಕಿನ ಸದಸ್ಯರು ತಮ್ಮ ಸದಸ್ಯತ್ವದ ಖಾತೆಯ ಹಣವನ್ನು ಮರುಪಾವತಿಸಲು ವಿನಂತಿಸಿದರೆ, ಅವರ ಸದಸ್ಯತ್ವದ ಶೇರು ಹಣವನ್ನು ವಾಪಸ್ ಮಾಡಬಹುದೇ? ಬರುತ್ತಿದ್ದರೆ, ಯಾವ ಕಾಯ್ದೆ/ ಸೆಕ್ಷನ್ ಅಡಿ ಬರುತ್ತದೆ. ದಯವಿಟ್ಟು ಸೂಕ್ತ ಮಾಹಿತಿಯನ್ನು ನೀಡಿ.**

**ಉತ್ತರ** : ಬ್ಯಾಂಕಿನ ಸದಸ್ಯರು ತಮ್ಮ ಶೇರು ಹಣವನ್ನು ಮರು ಪಾವತಿಸಲು ವಿನಂತಿಸಿದರೆ, ಅವರ ಸದಸ್ಯತ್ವದ ಶೇರು ಹಣವನ್ನು ವಾಪಸು ನೀಡಬೇಕಾಗಿರುವುದು ಬ್ಯಾಂಕಿನ/ ಸಹಕಾರಿಯ ಜವಾಬ್ದಾರಿಯಾಗುತ್ತದೆ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 10(2) (iii)ರನ್ವಯ ಸದಸ್ಯತ್ವ ಹಿಂತೆಗೆದುಕೊಳ್ಳುವ ವಿಧಾನವನ್ನು ಆಯಾ ಸಹಕಾರಿಯ/ ಬ್ಯಾಂಕಿನ ಉಪವಿಧಿಯಲ್ಲಿ ಅಳವಡಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ.

ಆದ್ದರಿಂದ, ಈ ಕುರಿತು ತಮ್ಮ ಸಹಕಾರಿಯ/ ಬ್ಯಾಂಕಿನ ಉಪವಿಧಿಯ ಪ್ರಾವಧಾನದಂತೆ ಕ್ರಮವಿಡುವುದು ಸೂಕ್ತವಾಗಿರುತ್ತದೆ.

ಸಾಮಾನ್ಯವಾಗಿ ಸಹಕಾರಿಗಳು ನಿಯಮಿತ ಹೊಣೆಗಾರಿಕೆ ಯೊಂದಿಗೆ ನೋಂದಣಿ ಹೊಂದುವುದರಿಂದ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 8ರನ್ವಯ ಸಹಕಾರಿಯ ಸದಸ್ಯರ ಹೊಣೆಗಾರಿಕೆಯು ಶೇರು ಮೊತ್ತಕ್ಕೆ ಸೀಮಿತವಾಗಿರುತ್ತದೆ. ಅಂದರೆ ಸಹಕಾರಿಯು ನಷ್ಟದಲ್ಲಿರುವಾಗ ಸದಸ್ಯರು ಶೇರು ಮೊತ್ತವನ್ನು ಪಡೆಯಲು ಅರ್ಹವಾಗುವುದಿಲ್ಲ. ಆದರೆ, ಸಹಕಾರಿಯು ಲಾಭದಲ್ಲಿರುವಾಗ ಸದಸ್ಯನ ಶೇರು ಮೊತ್ತವನ್ನು ವಾಪಸು ನೀಡುವುದು ಕಡ್ಡಾಯವಾಗಿರುತ್ತದೆ.

# ಯುವ ಪೀಳಿಗೆ ಹಾಗೂ ಗ್ರಾಮೀಣ ಪ್ರತಿಭೆಗೆ "ಮುದ್ರಾ" ರಹದಾರಿ

ಶ್ರೀ ಶಿವಪ್ರಸಾದ್ ಟಿ., ಕಿರಿಯ ಸಹಾಯಕ, ಹಣಕಾಸು ವಿಭಾಗ, ಕ.ರಾ.ಸೌ.ಸಂಸ.ನಿ.,

ಭಾರತದ ಯುವ ಸಮೂಹವನ್ನೇ ಕೇಂದ್ರವಾಗಿಟ್ಟುಕೊಂಡು ಪ್ರಾರಂಭದಿಂದಲೂ ಪ್ರೇರಣದಾಯಕರಾದ ನಮ್ಮ ದೇಶದ ಪ್ರಧಾನ ಮಂತ್ರಿಯವರಾದ ಶ್ರೀಯುತ ನರೇಂದ್ರಮೋದಿಯವರು ಒಂದಿಲ್ಲೊಂದು ವಿಶೇಷ ರೀತಿಯ ಯೋಜನೆಗಳನ್ನು ಜಾರಿಗೊಳಿಸಿ ದೇಶ-ವಿದೇಶಗಳಲ್ಲಿ ಪ್ರಬುದ್ಧಗೊಳಿಸಿ ಭಾರತ ಅಭಿವೃದ್ಧಿ ಪಥದಲ್ಲಿ ಸಾಗುವ ಪ್ರಯತ್ನಗಳು ನಡೆದಿವೆ.

ಸಬ್ ಕಾ ಸಾಥ್ ಸಬ್ ಕಾ ವಿಕಾಸ್ – ಬೇಟಿ ಬಛಾವೋ ಬೇಟಿ ಪಡಾವೋ – ಡಿಜಿಟಲ್ ಇಂಡಿಯಾ – ಮೇಕ್ ಇನ್ ಇಂಡಿಯಾ – ಸ್ವಚ್ಚ ಭಾರತ – #Give It Up ನಂತಹ ಇನ್ನೂ ಹತ್ತು ಹಲವು ರೀತಿಯ ವಿಶಿಷ್ಠ ಯೋಜನೆಯನ್ನು ಪರಿಚಯಿಸಿ, ಅದನ್ನು ಮುನ್ನಡೆಸುವಲ್ಲಿ ಯಶಸ್ವಿಯಾಗಿದ್ದಾರೆ. ಈ ಎಲ್ಲಾ ಯಶಸ್ಸಿನ ಜೊತೆಗೆ ಇತ್ತಿಚೆಗಷ್ಟೇ ಜಾರಿಯಾಗಿರುವುದು "ಮುದ್ರಾ" (Micro Units Development & Refinance Agency) ಯೋಜನೆ.

**ಏನಿದು ಮುದ್ರಾ..? :** ಯುವ ಜನತೆ ಆಸಕ್ತಿಗಳಿಗೆ, ಕಲ್ಪನೆಗಳಿಗೆ, ಸ್ವ-ಉದ್ಯೋಗಾಂಕ್ಷಿಗಳಾಗಿ ಹೊರ ಹೊಮ್ಮಲು ಅಲ್ಲದೇ ಹೆಚ್ಚಿನದಾಗಿ ಗ್ರಾಮೀಣ ಪ್ರತಿಭೆಗಳಿಗೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ವಿಭಿನ್ನ ರೀತಿಯಲ್ಲಿ ಜಾರಿಯಾಗಿರುವ ಯೋಜನೆಯೇ ಮುದ್ರಾ. ಈ ಯೋಜನೆಯು ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳನ್ನು ಹೊರತುಪಡಿಸಿ, ಆರ್ಥಿಕವಾಗಿ ಸದೃಢರನ್ನಾಗಿ ಮಾಡಲು ಕಿರು ಉದ್ಯಮಕ್ಕೆ ಸಾಲ ನೀಡಲು "ಮುದ್ರಾ" (Micro Units Development & Refinance Agency) ಅವಕಾಶಗಳಿವೆ.

**ಮುದ್ರಾ ನಮ್ಮ ಸಹಕಾರಿ ಕ್ಷೇತ್ರಗಳಲ್ಲಿ :** ಸರ್ಕಾರ ಹಾಗೂ ಖಾಸಗಿ ಸಂಸ್ಥೆಗಳು ಇತ್ತೀಚೆಗೆ ಹೆಚ್ಚು ಗ್ರಾಮೀಣ ಭಾಗದ ಅಭಿವೃದ್ಧಿ ಮತ್ತು ಆರ್ಥಿಕ ಸುಧಾರಣೆಯಾಗಬೇಕೆಂಬ ಆಶಾವಾದದಿಂದ ಶ್ರಮಿಸುತ್ತಿದೆ. ಆದರೆ, ನಮ್ಮ ಸಹಕಾರಿ ಚಳುವಳಿಯು ಮತ್ತು ಸಹಕಾರ ಕ್ಷೇತ್ರವು ಬೆಳೆದು ಬಂದಿರುವುದೇ ಗ್ರಾಮೀಣ ಭಾಗದಿಂದ ಎಂಬುದು ಇತಿಹಾಸ. ನಮ್ಮ ದೇಶದ ಶೇಕಡ 97 ರಷ್ಟು ಹಳ್ಳಿಗಳಲ್ಲಿ ಸಹಕಾರ ಕ್ಷೇತ್ರ ಯಶಸ್ವಿ ಕಾರ್ಯಚರಣೆ ನಡೆಸುತ್ತಿದೆ. ಹಳ್ಳಿ-ಹಳ್ಳಿಗೂ, ಗ್ರಾಮ-ಗ್ರಾಮಕ್ಕೂ ಇರುವ ಈ ಸಹಕಾರ ಕ್ಷೇತ್ರ ಸಾಧನೆ ಅರಿತ ಕೇಂದ್ರ ಸರ್ಕಾರ "ಮುದ್ರಾ" ಯೋಜನೆಯನ್ನು ಜಾರಿಗೊಳಿಸಿ, ದೇಶದ ಪ್ರತಿಯೊಂದು ವಾಣಿಜ್ಯ ಬ್ಯಾಂಕ್, ಗ್ರಾಮೀಣ ಬ್ಯಾಂಕ್, ಪ್ರಾದೇಶಿಕ ಬ್ಯಾಂಕ್, ರಾಜ್ಯ ಸಹಕಾರಿ ಬ್ಯಾಂಕ್‌ಗಳ ಮೂಲಕ ಸಣ್ಣ ಉದ್ದಿಮೆಗಳಿಗೆ ಸಾಲ ನೀಡುವ ಯೋಜನೆಗೆ ಅವಕಾಶ ಕಲ್ಪಿಸಿದೆ.

**ಮುದ್ರಾ ವಿಧಗಳು :** ಈ ಯೋಜನೆಯ ಆಶಾವಾದಂತೆ ಯುವ ಜನತೆ ಹಾಗೂ ಜನ ಸಾಮಾನ್ಯರೂ ಹೊಸ ಉದ್ಯಮಿಗಳಾಗಿ ಹೊರಹೊಮ್ಮಲು ಸ್ಪಷ್ಟವಾಗಿ ಅರ್ಥವಾಗುವ ರೀತಿಯಲ್ಲಿ ಮೂರು ವಿಧಾನದಲ್ಲಿ ಯೋಜನೆಯನ್ನು ವರ್ಗೀಕರಿಸಲಾಗಿದೆ ;

- **ಶಿಶು ಸಾಲ :** ಈ ವಿಧಾನದಲ್ಲಿ ಫಲಾನುಭವಿಯು ರೂ. 50,000/- ವರೆಗೆ ಸಾಲ ಪಡೆಯಬಹುದಾಗಿದೆ.
- **ಕಿಶೋರ ಸಾಲ :** ಈ ವಿಧಾನದಲ್ಲಿ ಫಲಾನುಭವಿಯು ರೂ. 50,000/- ದಿಂದ 5,00,000/- ವರೆಗೆ ಸಾಲ ಪಡೆಯ ಬಹುದಾಗಿದೆ.
- **ತರುಣ ಸಾಲ :** ಈ ವಿಧಾನದಲ್ಲಿ ಫಲಾನುಭವಿಯು ರೂ. 5,00,000/- ದಿಂದ 10,00,000/- ವರೆಗೆ ಸಾಲ ಪಡೆಯಬಹುದಾಗಿದೆ.

**ಮುದ್ರಾ ಪ್ರಕ್ರಿಯೆ :**

- ಮೂರು ವಿಧದ ಸಾಲಗಳಲ್ಲಿ ಫಲಾನುಭವಿಯು ಯಾವ ವಿಧವೆಂದು ಪರಿಗಣಿಸುವುದು.
- ಫಲಾನುಭವಿಯ ಅವಶ್ಯಕತೆಗಳಿಗೆ ಅನುಗುಣವಾಗಿ ಸಾಲ ಸೌಲಭ್ಯ ಕಲ್ಪಿಸುವುದು.

- ಫಲಾನುಭವಿಯು ಮಾಡಲಿಚ್ಛಿಸುವ ಉದ್ಯೋಗವೇನೆಂದು ತಿಳಿದು, ಅದಕ್ಕೆ ಅನುಗುಣವಾಗಿ ಸಾಲ ನೀಡುವ ಪ್ರಕ್ರಿಯೆ ಪ್ರಾರಂಭವಾಗುತ್ತದೆ.
- ಸ್ಥಳೀಯ ಬ್ಯಾಂಕ್‌ಗಳಿಗೆ ಸಂಪರ್ಕಿಸಿ, ಮುದ್ರಾ ಯೋಜನೆ ಅಡಿಯಲ್ಲಿ ಸಾಲ ಪಡೆಯಬಹುದಾಗಿದೆ.

**ಮುದ್ರಾ ಫಲಾನುಭವಿಯ ಅರ್ಹತೆ :** ಈ ಯೋಜನೆಯಲ್ಲಿ ಕೃಷಿಯೇತರ ವಾಣಿಜ್ಯ ಚಟುವಟಿಕೆಗಳಿಗೆ, ವ್ಯಾಪಾರ, ಸೇವಾವಲಯ, ಉತ್ಪಾದನೆ, ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕಾ ಚಟುವಟಿಕೆಗಳಿಗೆ, ಗುಡಿ ಕೈಗಾರಿಕಾ ಚಟುವಟಿಕೆಗಳಿಗೆ ಕನಿಷ್ಠ ರೂ. ಐವತ್ತು ಸಾವಿರದಿಂದ ರೂ. ಹತ್ತು ಲಕ್ಷದ ವರೆಗೆ ಸಾಲ ನೀಡಲಾಗುತ್ತದೆ.

**ಮುದ್ರಾದ KYC (Know Your Customer) ನಿಯಮಗಳು :**

- **ಐ.ಡಿ. ಪುರಾವೆ :** ಫಲಾನುಭವಿಯ ಗುರುತಿನ ಚೀಟಿ (DL/PAN/Voter ID/AADAR/Passport) ಗಳಲ್ಲಿ ಯಾವುದಾದರೂ ಒಂದು ಪ್ರತಿಯನ್ನು ಪುರಾವೆಯಾಗಿ ಸಂಬಂಧಿಸಿದ ಶಾಖೆಗೆ ಸಲ್ಲಿಸಬೇಕು.
- **ವಸತಿ ಪುರಾವೆ :** ಫಲಾನುಭವಿಯ ವಾಸಸ್ಥಳ ಧೃಢೀಕರಣಕ್ಕೆ (Telephone bill/Electricity bill/Revenue bills/Other utility bills) ಗಳಲ್ಲಿ ಯಾವುದಾದರೂ ಒಂದು ಪ್ರತಿಯನ್ನು ಪುರಾವೆಯಾಗಿ ಸಂಬಂಧಿಸಿದ ಶಾಖೆಗೆ ಸಲ್ಲಿಸಬೇಕು.
- **ಭಾವಚಿತ್ರ ಪುರಾವೆ :** ಫಲಾನುಭವಿಯ ಇತ್ತೀಚಿನ ಪಾಸ್ ಪೋರ್ಟ್ ಅಳತೆಯ ಭಾವಚಿತ್ರ ಪುರಾವೆಯಾಗಿ ಸಲ್ಲಿಸಬೇಕು.
- **ಉತ್ಪನ್ನ ಹಾಗೂ ಯಂತ್ರಗಳ ಕೊಟೇಷನ್ :** ಫಲಾನುಭವಿಯು ಮಾಡಲಿಚ್ಛಿಸುವ ಉದ್ಯೋಗಕ್ಕೆ ಅನುಗುಣವಾಗಿ ಬೇಕಿರುವ ಯಂತ್ರೋಪಕರಣಗಳ, ಉತ್ಪನ್ನಗಳ, ಕಚ್ಚಾ ಸಾಮಗ್ರಿ ಹಾಗೂ ಸರಕುಗಳ ಬೆಲೆ ನಿಗದಿಪಡಿಸುವ ಕೊಟೇಷನ್ ಅನ್ನು ಸಲ್ಲಿಸಬೇಕು.

**ಮುದ್ರಾ ಕಾರ್ಡ್ :** ಪ್ರಧಾನಮಂತ್ರಿ ಮುದ್ರಾ ಯೋಜನೆಯಡಿಯಲ್ಲಿ ಸಾಲ ಪಡೆದ ಫಲಾನುಭವಿಗಳಿಗೆ ಹೊಸದಾಗಿ ಕಾರ್ಡ್ ಒಂದನ್ನು ಪರಿಚಯಿಸಿದೆ. ಅದೇ 'ಮುದ್ರಾ ಕಾರ್ಡ್'.

'ಮುದ್ರಾ ಕಾರ್ಡ್'ನ ವಿಶೇಷತೆ ಎಂದರೆ ಸಾಲ ಪಡೆದ ಫಲಾನುಭವಿಯು ಈ ಕಾರ್ಡ್‌ನ್ನು ಸುಲಭ ಮಾರ್ಗದಲ್ಲಿ ಕ್ರೆಡಿಟ್ ಕಾರ್ಡ್‌ನ ರೀತಿಯಾಗೇ ಉಪಯೋಗಿಸಬಹುದಾಗಿದೆ. ಅಲ್ಲದೇ, ಯಂತ್ರೋಪಕರಣಗಳಿಗೆ ಕಚ್ಚಾ ಸಾಮಾಗ್ರಿಗಳನ್ನು ಖರೀದಿಸುವಾಗ ಈ ಕಾರ್ಡ್‌ನ್ನು ಬಳಸಬಹುದಾಗಿದೆ. ಆದರೆ, ಈ ಕಾರ್ಡ್‌ನ ಮಿತಿಯು ಸಾಲ ಪಡೆದ ಶೇಕಡ 10 ಮಾತ್ರ ಉಪಯೋಗಿಸಬಹುದಾಗಿದೆ.




**ಉದಾಹರಣೆ :** ಶಿಶು ರೂಪದ ಸಾಲವಾದಲ್ಲಿ ರೂ.50,000ದ ಒಳಪಟ್ಟು ಅದರ ಮೇಲೆ ಶೇಕಡ 10 ಭಾಗವಾಗಿ ಒಟ್ಟು ರೂ.5,000 ಮಾತ್ರ ಖರೀದಿ ಮಾಡಬಹುದು. ಈ ರೀತಿಯಲ್ಲಿ "ಮುದ್ರಾ ಕಾರ್ಡ್" ಬಳಕೆ ಆಯಾ ವಿಧವಾದ ಸಾಲಕ್ಕೆ ತಕ್ಕಂತೆ ಖರೀದಿಸಬಹುದಾಗಿದೆ. ಮುದ್ರಾವು ಪ್ರಧಾನ ಮಂತ್ರಿಯವರ ಯೋಜನೆಗಳಲ್ಲಿ ಒಂದು ಯೋಜನೆಯಾಗಿರುವುದೇ ಹೊರತು ಮುದ್ರಾ ಬ್ಯಾಂಕ್ ಅಲ್ಲ. ಈ ಯೋಜನೆಯು ಈಗಾಗಲೇ ತಿಳಿಸಿರುವಂತೆ ದೇಶದ ಎಲ್ಲಾ ವಾಣಿಜ್ಯ ಬ್ಯಾಂಕ್, ಗ್ರಾಮೀಣ ಬ್ಯಾಂಕ್, ಪ್ರಾದೇಶಿಕ ಬ್ಯಾಂಕ್, ರಾಜ್ಯ ಸಹಕಾರಿ ಬ್ಯಾಂಕ್‌ಗಳು ಕೂಡ ಮುದ್ರಾ ಅಡಿಯಲ್ಲಿ ಬರುತ್ತವೆ. ಒಟ್ಟಿನಲ್ಲಿ ಅರ್ಹ ಫಲಾನುಭವಿ ಯುವ ಸಮೂಹ ಈ ಯೋಜನೆಯ ಲಾಭ ಪಡೆದು ಸ್ವ-ಉದ್ಯೋಗಿಗಳಾಗಿ, ಸ್ವಾವಲಂಬಿಯಾಗುವುದೇ ಆಶಯ ಹಾಗೂ ಈ ಯೋಜನೆ ರೂಪುರೇಷೆಗೆ ತಕ್ಕಂತೆ ನಮ್ಮ ಸದಸ್ಯ ಸೌಹಾರ್ದ ಸಹಕಾರಿಗಳೂ ಒಳಪಟ್ಟು "ತಾನು ಎಲ್ಲರಿಗಾಗಿ, ಎಲ್ಲರೂ ತನಗಾಗಿ" ಎಂಬ ಸಹಕಾರ ತತ್ವದ ಪಾಲನೆ ಈ ಯೋಜನೆಯಿಂದ ಮಾಡಬಹುದಾಗಿದೆ.

ಮಾಹಿತಿ : http://www.mudra.org.in/

## ರಾಷ್ಟ್ರೀಯ ಸಹಕಾರ ಭಾರತಿ ನೂತನ ಅಧ್ಯಕ್ಷರಾಗಿ ಜ್ಯೋತೀಂದ್ರ ಭಾಯಿ ಮೆಹತಾ, ಉಪಾಧ್ಯಕ್ಷರಾಗಿ ಶ್ರೀ ಕೊಂಕೋಡಿ ಪದ್ಮನಾಭ ಆಯ್ಕೆ

ದಿನಾಂಕ : 22.11.2015 ರಂದು ಅಹ್ಮದಾಬಾದ್‌ನಲ್ಲಿ ನಡೆದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಸಹಕಾರ ಭಾರತೀಯ ರಾಷ್ಟ್ರೀಯ ಅಧ್ಯಕ್ಷರಾಗಿ ಹಿರಿಯ ಸಹಕಾರಿ, ಗುಜರಾತಿನ ಶ್ರೀ ಜ್ಯೋತೀಂದ್ರ ಭಾಯಿ ಮೆಹತಾರವರು ಹಾಗೂ ಉಪಾಧ್ಯಕ್ಷರಾಗಿ ಕರ್ನಾಟಕದ ಹಿರಿಯ ಸಹಕಾರಿ ಶ್ರೀ ಕೊಂಕೋಡಿ ಪದ್ಮನಾಭರವರು ಆಯ್ಕೆಯಾಗಿದ್ದಾರೆ.



# ಸಹಕಾರ ಸಂಘಗಳ ಮೂಲಕ ಸ್ವಚ್ಛ ಭಾರತ, ನಿರ್ಮಲಭಾರತ ಅಭಿಯಾನದ ಅನುಷ್ಠಾನ

ಶ್ರೀ ಎಸ್.ವೀರೇಶ, ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ)

ದೇಶದ ಮೊಟ್ಟ ಮೊದಲ ಕೃಷಿ ಪತ್ತಿನ ಸಹಕಾರ ಸಂಘ ಕರ್ನಾಟಕದ ಗಂಡುಭೂಮಿ, ಅಂದಿನ ಧಾರವಾಡ ಜಿಲ್ಲೆ ಮತ್ತು ಈಗಿನ ಗದಗ ಜಿಲ್ಲೆಯ ಕಣಗಿನಹಾಳದಲ್ಲಿ ಶ್ರೀ ಸಿದ್ಧನಗೌಡ ಸಣ್ಣರಾಮನಗೌಡ ಪಾಟೀಲ ಎಂಬ ಕೃಷಿಕ ಮುಂದಾಳುವಿನಿಂದ ಪ್ರಾರಂಭವಾಗಿರುವುದು ಇತಿಹಾಸ.

ಒಂದು ಶತಮಾನಕ್ಕೂ ಹೆಚ್ಚಿನ ಇತಿಹಾಸವುಳ್ಳ ಸಹಕಾರ ಕ್ಷೇತ್ರ, ದೇಶ ಮತ್ತು ರಾಜ್ಯದಲ್ಲಿ ವಿಶಾಲವಾದ ತಳಹದಿಯ ಮೇಲೆ ಸ್ಥಾಪನೆಯಾಗಿದ್ದು, ತನ್ನ ಕಾರ್ಯ ಚಟುವಟಿಕೆಗಳನ್ನು ವರ್ಷಂಪ್ರತಿ ವಿಸ್ತರಿಸುತ್ತಾ ಸಮಾಜದ ಎಲ್ಲಾ ಆಯಾಮಗಳಿಗೆ ವ್ಯಾಪಿಸಿದೆ. ತನ್ನ ಸೇವೆಯ ಗುರುತುಗಳನ್ನು ಸ್ಪಷ್ಟವಾಗಿ ಮೂಡಿಸುತ್ತಾ ಜನಸಾಮಾನ್ಯರ ಬದುಕಿನ ಹಾಸುಹೊಕ್ಕಾಗಿದೆ. ಕರ್ನಾಟಕ ರಾಜ್ಯದಲ್ಲಿ 35000 ಸಾವಿರಕ್ಕೂ ಹೆಚ್ಚು ಸಹಕಾರ ಸಂಘಗಳು ತಮ್ಮ ಸೇವೆಗಳನ್ನು ತನ್ನ ಸದಸ್ಯರಿಗೆ ಮತ್ತು ಸಾರ್ವಜನಿಕರಿಗೆ ನೀಡುತ್ತಿವೆ. ಕರ್ನಾಟಕ ರಾಜ್ಯವು ದೇಶದ ಸಹಕಾರ ಕ್ಷೇತ್ರದಲ್ಲಿ ಗುಜರಾತ್ ಮತ್ತು ಮಹಾರಾಷ್ಟ್ರ ನಂತರದ ಮೂರನೇ ಸ್ಥಾನದಲ್ಲಿದ್ದು, ಜನರ ಮೆಚ್ಚುಗೆಗಳಿಸಿದೆ.

ತಮ್ಮ ಕಾರ್ಯಕ್ಷೇತ್ರಗಳ ಸೇವೆಗಳ ಜೊತೆಗೆ ಸಮಾಜಮುಖಿ ಕಾರ್ಯಗಳನ್ನು ಸಂದರ್ಭ ಮತ್ತು ಪರಿಸ್ಥಿತಿಗನುಗುಣವಾಗಿ ಕೈಗೆತ್ತಿಕೊಂಡು ತಮ್ಮ ಶಕ್ತಿಗನುಸಾರವಾಗಿ ಕಾರ್ಯರೂಪಕ್ಕೆ ತರುವ ಗುಣವನ್ನು ಸಹ ಕರ್ನಾಟಕ ರಾಜ್ಯದ ಸಹಕಾರಿಗಳು, ಸಹಕಾರ ಸಂಘಗಳು ಮೈಗೂಡಿಸಿಕೊಂಡಿವೆ. ರಾಜ್ಯದಲ್ಲಿ, ದೇಶದಲ್ಲಿ ಭೂಕಂಪ, ಚಂಡಮಾರುತ, ಬರಗಾಲದ ಬವಣೆ, ನೆರೆಹಾವಳಿ ಮುಂತಾದ ಪ್ರಕೃತಿ ವಿಕೋಪಗಳಾದಾಗ ಎಲ್ಲಾ ಸಹಕಾರ ಸಂಘಗಳು ಮತ್ತು ಅವುಗಳ ಆಡಳಿತ ನಡೆಸುವ ಸಹಕಾರಿ ಮುಖಂಡರು ಸಮಯೋಚಿತವಾಗಿ ಮತ್ತು ಗಣನೀಯವಾಗಿ ಶಕ್ತಿ ಮೀರಿ ತಮ್ಮ ನೆರವನ್ನು ನೀಡಿರುತ್ತಾರೆ.

2009ರಲ್ಲಿ ಕರ್ನಾಟಕದಲ್ಲಿ ಕಂಡು ಕೇಳರಿಯದ ರೀತಿಯಲ್ಲಿ ರಾಜ್ಯದ ಉತ್ತರ ಕರ್ನಾಟಕದ ಹೆಚ್ಚಿನ ಜಿಲ್ಲೆಗಳಲ್ಲಿ ನೆರೆಹಾವಳಿ ಸಂಭವಿಸಿದಾಗ ನೂರಾರುಕೋಟಿ ನಿಧಿಯನ್ನು ಸಹಕಾರ ಸಂಘಗಳಿಂದ ಸಂಗ್ರಹಿಸಿ, ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಸಮರ್ಪಿಸಿರುವುದು ಉದಾಹರಣೆಯಾಗಿದೆ. ಅಂತೆಯೇ ಸರ್ಕಾರ ಸೂಚಿಸುವ ಯಾವುದೇ ಜನೋಪಯೋಗಿ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಗುಣವನ್ನು ಹೊಂದಿದ್ದು, ಈ ಕಾರಣದಿಂದ



ಸರ್ಕಾರಗಳ ಮತ್ತು ಜನಸಾಮಾನ್ಯರ ಮೆಚ್ಚುಗೆಯನ್ನೂ ಸಹ ಸಹಕಾರ ಸಂಸ್ಥೆಗಳು ಗಳಿಸಿವೆ.

ನಿರ್ಮಲ ಭಾರತ–ಸ್ವಚ್ಛ ಭಾರತ ಅಭಿಯಾನದಲ್ಲಿಯೂ ಸಹ ದೇಶದ ಪ್ರಧಾನ ಮಂತ್ರಿಗಳ ಕರೆಗೆ ಪೂರಕವಾಗಿ ಸಹಕಾರ ಸಂಘಗಳು ಸ್ಪಂಧಿಸಿ ಕಾರ್ಯನ್ಮುಖವಾಗಿರುವುದು ಔಚಿತ್ಯಪೂರ್ಣವಾಗಿದೆ. ಸಹಕಾರ ಇಲಾಖೆಯ ಸೂತ್ತೋಲೆ ಸೂಚನೆಗಳಂತೆ ನಿರ್ಮಲ ಭಾರತ ಕಾರ್ಯಕ್ರಮಗಳಲ್ಲಿ ಗ್ರಾಮೀಣ ಪ್ರದೇಶದ ನೈರ್ಮಲ್ಯ ಮತ್ತು ಸ್ವಚ್ಛತೆಯ ಬಗ್ಗೆ ಆಸಕ್ತಿ ವಹಿಸಿ ಯೋಜನೆಯ ಉದ್ದೇಶಗಳನ್ನು ಜಾರಿಗೊಳಿಸಲು ಶ್ರಮಿಸುತ್ತಿವೆ. ಇನ್ನೂ ಮುಂದೆಯೂ ಸಹ ಯೋಜನೆಯ ಯಶಸ್ಸಿಗೆ ಸಹಕಾರ ಸಂಸ್ಥೆಗಳು ತಮ್ಮದೇ ಆದ ಕಾರ್ಯಕ್ರಮಗಳನ್ನು ಹಾಕಿಕೊಂಡು ಮುಂದುವರೆಯುವ ಭರವಸೆ ಮೂಡಿಸಿವೆ. ಕೃಷಿಕರ, ಜನಸಮಾನ್ಯರ ಆರ್ಥಿಕ ಅಭಿವೃದ್ಧಿಗಾಗಿ ಸ್ಥಾಪನೆಯಾದಂತಹ ಸಹಕಾರ ಸಂಘಗಳು ತಮ್ಮ ಕಾರ್ಯಕ್ಷೇತ್ರವನ್ನು ಪುಟ್ಟ ಹಳ್ಳಿಯಿಂದ ಹಿಡಿದು ದೇಶದ, ರಾಜ್ಯದ ರಾಜಧಾನಿಗಳವರೆಗೂ ಸಹ ತಮ್ಮ ಸಂಪರ್ಕ ಜಾಲವನ್ನು ಹೊಂದಿವೆ. ಈ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿನ ನೈರ್ಮಲ್ಯ ಅಭಿವೃದ್ಧಿಯ ನಿರ್ಮಲ ಭಾರತ ಅಭಿಯಾನಕ್ಕೆ ಈ ಕೆಳಗಿನಂತೆ ಕಾರ್ಯೋನ್ಮುಖವಾಗುವುದು ಸೂಕ್ತವೆನಿಸುತ್ತದೆ.

1. ಕೃಷಿಪತ್ತಿನ ಸಹಕಾರ ಸಂಘಗಳು ತಮ್ಮ ಕಾರ್ಯವ್ಯಾಪ್ತಿಯನ್ನು ಹತ್ತಾರು ಗ್ರಾಮಗಳಿಗೆ ವಿಸ್ತರಿಸಿಕೊಂಡಿರುವುದು ಸರಿಯಷ್ಟೆ, ಈ ಗ್ರಾಮಗಳ ಜನ ಸಂಖ್ಯೆಯ, ವಾಸದ ಮನೆಗಳ, ಕೃಷಿಭೂಮಿಯ, ಜಾನುವಾರುಗಳ ವಿವರಗಳನ್ನು ಈಗಾಗಲೇ ಹೊಂದಿರುತ್ತವೆ. ಇದರ ಜೊತೆಗೆ ಕಾರ್ಯಕ್ಷೇತ್ರದಲ್ಲಿ ಇರುವ ಕುಡಿಯುವ ನೀರಿನ

ಸರಬರಾಜಿನ ಮೂಲಗಳ ಬಗ್ಗೆ ಶೌಚಾಲಯಗಳ ಲಭ್ಯತೆಯ, ಶಾಲಾ ಕಾಲೇಜುಗಳ ಮತ್ತು ಅಲ್ಲಿನ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಬಗ್ಗೆ, ಲಭ್ಯವಿರುವ ಸಾರ್ವಜನಿಕ ಆರೋಗ್ಯ ಕೇಂದ್ರಗಳ (PHC) ವಿವರ, ಸಾರಿಗೆ ವ್ಯವಸ್ಥೆಯ ಮೂಲಗಳ ವಿವರ, ಗ್ರಾಮಗಳಲ್ಲಿ ಋತುಮಾನಕ್ಕನುಸಾರವಾಗಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ರೋಗಗಳ ವಿವರ ಮುಂತಾದ ಅಂಕಿ–ಅಂಶಗಳನ್ನು ಸಂಗ್ರಹಿಸಿ, ಅವುಗಳನ್ನು ಕಾಲಾನುಕಾಲಕ್ಕೆ ನಿಖರಗೊಳಿಸಿಟ್ಟುಕೊಳ್ಳುವುದು. ಈ ಕ್ರಮವು ಮುಂದಿನ ಕಾರ್ಯಯೋಜನೆಗಳಿಗೆ ತುಂಬಾ ಉಪಯುಕ್ತವಾಗುವುದು.

2. ನಿರ್ಮಲ ಭಾರತ ಕಾರ್ಯಕ್ರಮಗಳ ಯೋಜನೆಗಳಿಗೆ ಸಂಬಂಧಿಸಿದಂತೆ, ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಂದ ನೀಡಲ್ಪಟ್ಟಿರುವ ಸುತ್ತೋಲೆ, ಮಾರ್ಗದರ್ಶನ, ಸರ್ಕಾರದ ಆದೇಶಗಳನ್ನು ಸಂಗ್ರಹಿಸಿ (ಕನ್ನಡ ರೂಪದಲ್ಲಿ) ಸಂಘದಲ್ಲಿ ಇಡುವುದು.
3. ನಿರ್ಮಲ ಭಾರತ – ಸ್ವಚ್ಛ ಭಾರತ ಅಭಿಯಾನದ ಅನುಷ್ಠಾನದ ಬಗ್ಗೆ ಸರ್ಕಾರದ ಸುತ್ತೋಲೆಯಂತೆ ಕಾರ್ಯೋನ್ಮುಖವಾಗಲು ಕ್ರಮವಹಿಸಬೇಕಾದ ವಿಷಯವನ್ನು ಸಂಘದ ಆಡಳಿದ ಮಂಡಳಿ ಸಭೆಯಲ್ಲಿ ಮಂಡಿಸಿ, ವಿವರವಾಗಿ ಚರ್ಚಿಸಿ, ಕಾರ್ಯಕ್ರಮ ರೂಪಿಸಿಕೊಳ್ಳುವುದು.
4. ತಮ್ಮ ಕಾರ್ಯವ್ಯಾಪ್ತಿಯ ಪ್ರದೇಶಗಳಲ್ಲಿ ತನ್ನ ಸದಸ್ಯರನ್ನೊಳಗೊಂಡಂತೆ ಸಾರ್ವಜನಿಕ ಸಭೆಗಳನ್ನು ಆಯೋಜಿಸಿ, ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡುವುದು ಮತ್ತು ಸಾರ್ವಜನಿಕರ, ಸದಸ್ಯರ ಸಲಹೆಗಳನ್ನು ಪಡೆಯುವುದು.
5. ನೈರ್ಮಲ್ಯದ ಬಗ್ಗೆ ಮತ್ತು ಕಲುಷಿತ ಆಹಾರ ಪದ್ಧತಿ, ಬಹಿರ್ದೆಸೆ ಶೌಚ ಪದ್ಧತಿಯಿಂದ ಉಂಟಾಗಬಹುದಾದ ದುಷ್ಪರಿಣಾಮಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು.
6. ಪ್ರತಿಯೊಬ್ಬ ಗ್ರಾಮವಾಸಿಯ ಗೃಹಗಳಿಗೆ ಶೌಚಾಲಯ ನಿರ್ಮಾಣಕ್ಕೆ ಬೇಕಾಗುವ ಮಾಹಿತಿ/ ನೆರವು ಸರ್ಕಾರದ ಸಂಬಂಧಪಟ್ಟ ಇಲಾಖೆಗಳ ಮೂಲಕ ದೊರೆಯುವ ಬಗ್ಗೆ ವಿವರ ನೀಡುವುದು. ಈ ದಿಸೆಯಲ್ಲಿ ವಿವಿಧ ಇಲಾಖೆ ಮತ್ತು ಗ್ರಾಮವಾಸಿಗಳ ಮಧ್ಯದ ಸಮನ್ವಯಾಧಿಕಾರಿಯ ಜವಾಬ್ಧಾರಿಯನ್ನು ತೆಗೆದುಕೊಳ್ಳುವುದು.
7. ಶಾಲಾ ಕಾಲೇಜು ಆವರಣಗಳನ್ನು ಚೊಕ್ಕಟವಾಗಿಟ್ಟುಕೊಳ್ಳುವ ಬಗ್ಗೆ ವಿದ್ಯಾರ್ಥಿಗಳ, ಉಪಾಧ್ಯಾಯರ ಸಹಕಾರ ಪಡೆದು, ಶಾಲಾ ಕಾಲೇಜಿನ ಆಡಳಿತ ಮಂಡಳಿ, ವ್ಯವಸ್ಥಾಪನಾ ಸಮಿತಿಗಳ ಮೂಲಕ ಕಾರ್ಯ ಯೋಜನೆ ರೂಪಿಸುವುದು.
8. ಕಾರ್ಯವ್ಯಾಪ್ತಿಯ ಪ್ರದೇಶದಲ್ಲಿರುವ ಕೊಳವೆ ಬಾವಿಗಳಲ್ಲಿ ಬರುವ ನೀರಿನ ಗುಣಮಟ್ಟವನ್ನು ಆಗಿಂದಾಗ್ಗೆ ಪರೀಕ್ಷಿಸಿ, ಮುಂದಿನ ಕ್ರಮವಹಿಸುವ ಬಗ್ಗೆ ಸಂಬಂಧಪಟ್ಟವರೊಡನೆ ಕಾರ್ಯಕ್ರಮ ರೂಪಿಸುವುದು.
9. ಕುಡಿಯುವ ನೀರಿನ ಮೂಲಕ ಬರುವ ಸಾಂಕ್ರಾಮಿಕ ರೋಗಗಳ ಬಗ್ಗೆ ಮಾಹಿತಿ ಸಂಗ್ರಹಿಸಿ, ಅವುಗಳ ತಡೆಗಟ್ಟುವಿಕೆ ಬಗ್ಗೆ ಸಂಬಂಧಪಟ್ಟ ಆರೋಗ್ಯ ಇಲಾಖೆಯವರ ಮೂಲಕ ಕಾರ್ಯಯೋಜನೆ ಜಾರಿಗೊಳಿಸಲು ಕ್ರಮವಹಿಸುವುದು.
10. ಗ್ರಾಮದ ಜನರ ಮತ್ತು ಸಂಘದ ಸದಸ್ಯರ ನೆರವಿನ ಮೂಲಕ ಸಂಘದ ಆರ್ಥಿಕ ಸಬಲತೆಗನುಸಾರವಾಗಿ ತನ್ನ ಕಾರ್ಯವ್ಯಾಪ್ತಿಯ ಪ್ರದೇಶಗಳಲ್ಲಿ ಸಾರ್ವಜನಿಕ ಶುದ್ಧ ನೀರಿನ ಘಟಕಗಳನ್ನು ಸ್ಥಾಪಿಸುವುದು ಮತ್ತು ಅವುಗಳ ನಿರ್ವಹಣೆಗೆ ಸೂಕ್ತ ವ್ಯವಸ್ಥೆಯನ್ನು ಅಳವಡಿಸುವುದು.
11. ಗ್ರಾಮಗಳ ಸಾರ್ವಜನಿಕ ಸ್ಥಳಗಳಲ್ಲಿ ಗ್ರಾಮದ ಶಾಲಾ ಕಾಲೇಜು ಆವರಣಗಳಲ್ಲಿ, ಬೀದಿ ಬದಿಯಲ್ಲಿ, ಬಾವಿ, ಕೆರೆಕಟ್ಟೆಗಳ ಬದಿಗಳಲ್ಲಿ ಮತ್ತು ಮನೆಗಳ ಸಮೀಪವಿರುವ ಲಭ್ಯ ಜಾಗಗಳಲ್ಲಿ ಗಿಡಮರಗಳನ್ನು, ವಿಶೇಷವಾಗಿ ಹಣ್ಣು ಹಂಪಲು ನೀಡುವ ಮತ್ತು ಔಷಧಿಯುಕ್ತ ಗಿಡಮರಗಳನ್ನು ನೆಡುವ ಮತ್ತು ಅವುಗಳ ನಿರ್ವಹಣೆಯನ್ನು ಮಾಡುವ ಬಗ್ಗೆ ಕಾರ್ಯಕ್ರಮ ರೂಪಿಸುವುದು.
12. ಗ್ರಾಮಗಳನ್ನು ಕಸಮುಕ್ತ ಮಾಡುವ ದಿಸೆಯಲ್ಲಿ ಕಸ ವಿಲೇವಾರಿ ವ್ಯವಸ್ಥೆ ಮತ್ತು ಚರಂಡಿ ವ್ಯವಸ್ಥೆಗಳ ಬಗ್ಗೆ ಸೂಕ್ತ ಕ್ರಮವಹಿಸುವುದು.
13. ಈ ಮೇಲ್ಕಂಡ ಎಲ್ಲಾ ಅಂಶಗಳ ಬಗ್ಗೆ ಗ್ರಾಮವಾಸಿಗಳಿಗೆ ತಿಳುವಳಿಕೆ ನೀಡಿ, ಎಲ್ಲರ ಸಲಹೆ ಸಹಕಾರಗಳನ್ನು ಪಡೆದು ಕಾರ್ಯಯೋಜನೆಗಳು ನಿರಂತರವಾಗಿ ಮುಂದುವರೆಯುವ ಬಗ್ಗೆ ಶ್ರಮಿಸುವುದು.

ನಿರ್ಮಲ ಭಾರತ – ಸ್ವಚ್ಛ ಭಾರತ ಕೇವಲ ಸರ್ಕಾರದ ಕೆಲಸವೆಂದು ಭಾವಿಸದೆ ಜನಸಾಮಾನ್ಯರು, ಸಮುದಾಯದ ಸಮಾಜದ ಒಟ್ಟಾರೆ ಕರ್ತವ್ಯವೆಂದು ಮತ್ತು ಪ್ರತಿಯೊಬ್ಬ ದೇಶವಾಸಿಯ ಜವಾಬ್ಧಾರಿಯೆಂದು ತಿಳಿದು, ಈ ಆಂದೋಲನದ ಬಗ್ಗೆ ಆಸಕ್ತಿವಹಿಸಿ, ಸಕ್ರಿಯವಾಗಿ ಭಾಗವಹಿಸಿದಲ್ಲಿ ಮಾತ್ರ ಈ ಅಭಿಯಾನ ಯಾವುದೇ ಸಂಶಯವಿಲ್ಲದೇ ತನ್ನ ಗುರಿಮುಟ್ಟುವುದು. **ಬನ್ನಿ ಕೈ ಜೋಡಿಸಿ, ನಾವೆಲ್ಲರೂ ಸೇರಿ ನಮ್ಮ ಗ್ರಾಮ, ನಮ್ಮ ನಗರ, ನಮ್ಮ ದೇಶವನ್ನು ಕಸಮುಕ್ತಗೊಳಿಸೋಣ. ಶುದ್ಧ ಪರಿಸರವನ್ನು ಬೆಳೆಸೋಣ, ರೋಗಮುಕ್ತ, ಆರೋಗ್ಯ ಪೂರ್ಣ ಜೀವನವನ್ನು ನಡೆಸೋಣ. ಮಾದರಿ ಸಮಾಜವನ್ನು ನಿರ್ಮಾಣ ಮಾಡೋಣ.**



# RBI NEWS - NOVEMBER 2015

K.Vittal Shetty

**Fifth Bi-monthly Monetary Policy Statement, 2015-16 announced By Dr. Raghuram G. Rajan, Governor on December 1, 2015.**

**Monetary and Liquidity Measures**

On the basis of an assessment of the current and evolving macroeconomic situation, it has been decided to:

- keep the policy repo rate under the liquidity adjustment facility (LAF) unchanged at 6.75 per cent;
- keep the cash reserve ratio (CRR) of scheduled banks unchanged at 4.0 per cent of net demand and time liability (NDTL);
- continue to provide liquidity under overnight repos at 0.25 per cent of bank-wise NDTL at the LAF repo rate and liquidity under 14-day term repos as well as longer term repos of up to 0.75 per cent of NDTL of the banking system through auctions; and
- Continue with daily variable rate repos and reverse repos to smooth liquidity.

Consequently, the reverse repo rate under the LAF will remain unchanged at 5.75 per cent, and the marginal standing facility (MSF) rate and the Bank Rate at 7.75 per cent.

The sixth bi-monthly monetary policy statement will be announced on Tuesday, February 2, 2016.

| **Policy Rates with effect from 29 September 2015** | **%** |
|---|---|
| POLICY REPO RATE | 6.75% |
| REVERSE REPO RATE | 5.75% |
| MARGINAL STANDING FACILITY RATE | 7.75% |
| BANK RATE | 7.75% |
| Reserve Ratios | % |
| Cash Reserve Ratio | 4% |
| Statutory Reserve Ratio w.e.f. February 7.2015 | 21.5% |

**I.IMPORTANT NEWS November 19, 2015**

Placement of Deposits with Other Banks by Primary (Urban) Co-operative Banks (UCBs)

RBI has revised the guidelines on placement of deposits with other banks by UCBs. It has been decided to permit scheduled UCBs to accept deposits from other scheduled UCBs, if it is part of an arrangement for providing specific services to the latter bank such as acting as the sponsor bank for clearing purposes, DD arrangement, CSGL facility, currency chest facility, foreign exchange transactions, remittance facility and non-fund based facilities like bank guarantee (BG), letter of credit (LC), etc. It has also been decided to permit only Scheduled UCBs fulfilling the following criteria to accept deposits from scheduled/ non-scheduled UCBs:

i. CRAR of not less than 10 per cent.

ii. Gross NPAs of less than 7% and Net NPAs of not more than 3%.

iii. Net profit for at least three out of the preceding four years subject to it not having incurred a net loss in the immediate preceding year.

iv. No default in the maintenance of CRR/ SLR during the preceding financial year.

v. Sound internal control system with at least two professional directors on the Board.

vi. Core Banking Solution (CBS) fully implemented.

Acceptance of deposits by scheduled UCBs from scheduled UCBs in the nature of placement of deposits for investment purposes is not permitted.

Those scheduled UCBs which have accepted deposits from other non-Scheduled UCBs but are not meeting the criteria mentioned above, are advised to phase out the existing deposits of other UCBs by March 31, 2019.

**November 19, 2015**

Inclusion in the Second Schedule to the Reserve Bank of India Act, 1934 – Apna Sahakari Bank Ltd, Mumbai

"Apna Sahakari Bank Ltd., Mumbai" has been included in the Second Schedule to the Reserve Bank of India Act, 1934.

**November 26, 2015**

Central KYC Records Registry (CKYCR) - template for Know

Swabhimani Sahakari, Monthly, Posting Day 8th.
Posted at Bangalore PSO, Mysore Road, Bangalore 560026
Registered No. RNP/BGW/1744/2014-16. RNI No. KARBIL - 2004/18001. Pages 24


Your Customer (KYC) and reporting requirements under Foreign Account Tax Compliance Act (FATCA)/ Common Reporting Standards (CRS)

The Government has amended the Prevention of Money Laundering (Maintenance of Records) Rules, 2005, (Rules), for setting up of the Central KYC Records Registry (CKYCR). The proposed CKYCR would receive, store, safeguard and retrieve the KYC records in digital form of a client, for which necessary amendments to the Rules have been made.

The KYC records received and stored by the CKYCR could be retrieved online by any reporting entity across the financial sector for the purpose of establishing an account based relationship in terms clause (a) and (b) of Rule 9. A formal announcement by the Government naming the entity which will function as the CKYCR is expected shortly.

In order to facilitate collating and reporting the KYC data to the proposed CKYCR, templates finalised in consultation with other regulators and CBDT (separate for individuals and legal entity). It may also be noted that in case of opening of 'Small Accounts', only personal details in section 1 of the template together with the photograph, signature/thumb impression and self-certification document should be obtained.

II.Cancellation, Withdrawl, Penalties and Directions on Urban Co-operative Banks for violation of guidelines and Directives

Nov 02, 2015:- RBI extends Direction on The C.K.P. Co-operative Bank Ltd., Mumbai, Maharashtra.

Nov 03, 2015:- RBI imposes Monetary Penalty 5.00 lakh (Rupees Five Lakh only) on The Mehsana District Central Cooperative Bank Ltd., Mehsana (Gujarat).

Nov 03, 2015:- RBI imposes Monetary Penalty of 1.00 lakh (Rupees one lakh only) on Chaitanya Co-operative Urban Bank Ltd., Hyderabad, Telangana.

Nov 03, 2015:- RBI imposes Monetary Penalty of 1.00 lakh (Rupees one lakh only) on The Madanapalle Co-operative Town Bank Ltd. Madanapalle, Chittor District, Andhra Pradesh.

Nov 03, 2015:- RBI withdraws Directions on The Panihati Co-operative Bank Limited, Kolkata.

Nov 05, 2015:- RBI imposes Monetary Penalty of 10 million on Dhanlaxmi Bank Ltd.

Nov 05, 2015:-RBI extends Directions issued to Dr. Babasaheb Ambedkar Nagari Sahakari Bank Maryadit, Aurangabad, Maharashtra till February 03, 2016

Nov 05, 2015:-RBI imposes Monetary Penalty of 5.00 lakh (Rupees Five Lakh) on The Vardhman Co-operative Bank Ltd., Dist. Jamnagar (Gujarat).

Nov 17, 2015:- RBI extends Directions issued to Shatabdi Mahila Sahakari Bank Ltd., Thane, District-Thane, Maharashtra till May 17, 2016.

Nov 19, 2015:- RBI extends Directions issued to Lokseva Sahakari Bank Ltd., Pune, Maharashtra till May 19, 2016.

Nov 26, 2015:- RBI imposes Monetary Penalty of 1.00 lakh (Rupees one lakh only) on The Karimnagar Co-operative Urban Bank Ltd., Karimnagar, Telangana.

Nov 26, 2015:;- RBI imposes Monetary Penalty of 1.00 lakh (Rupees one lakh only) on Swasakthi Mercantile Co-operative Urban Bank Ltd. Vijayawada, Krishna District, Andhra Pradesh.

Nov 30, 2015:;- RBI extends Directions issued to Choundeshwari Sahakari Bank Ltd, Ichalkaranji, Kolhapur till May 31, 2016.

**Source: www.rbi.org.in**

ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್,1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1-ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು.560 010. ದೂ: 080 – 23525546
ಮೈಸೂರು ವಿಭಾಗೀಯ ಕಛೇರಿ : ನಂ. 200, ಶಂಕರ ಮಠ ಮುಖ್ಯರಸ್ತೆ, ಕಿಲ್ಲೇ ಮೊಹಲ್ಲಾ, ಮೈಸೂರು. ದೂ : 0821 – 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂ : 0831 – 2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1-4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಕಲಬುರಗಿ – 585102. ದೂ : 08472 – 270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010